Mr. SPEAKER.—I have said the very same thing but I know how objection was raised. I do not want to have that unpleasant scene in the House. Unless the House adopts it in one voice, I do not want to adopt this procedure to-day.

Sri L. SIDDAPPA (Channagiri).—I hope there is no objection for this from anybody, Sir.

Mr. SPEAKER.—Shall I take it as agreed to by the House ?

SEVERAL MEMBERS.—Yes, Sir.

Mr. SPEAKER.—Then, Demand will be proposed by the Chair and there will be discussion on the main demand itself.

SEVERAL MEMBERS.—Yes, Sir.

Mr. SPEAKER.—Thank you.

Demand No. 21 : 10-30 to 11.
Demand No. 22 : 11 to 11-15.
Demand No. 23 : 11-15 to 12.
Demand No. 24 : 12 to 12-30.

I think that would be all right. Now Demand No. 21.

DEMAND No. 21—AGRICULTURE.

40. Agriculture (Except Botanical and other Public Gardens).

Mr. SPEAKER.—Motion moved :

"That a sum not exceeding Rs. 52,73,333 be granted to the Government to defray the charges which will come in course of payment during the year ending 31st day of March 1955, in respect of 'Agriculture (Except Botanical and other Public Gardens)'."

The Leader of the Opposition will have ten minutes and other members will have not more than seven minutes each.

Sri J. MOHAMED IMAM (Jagalur).—I rise to oppose this demand. I am glad that this procedure has been adopted and I am not going to take more than ten minutes. Sir, Agricultural Department is one of the most important departments, and the expenditure on this department is gradually going up. We must consider what the corresponding benefits derived are for having spent such a huge sum of more than Rs.52 lakhs. Sir, our country is an agricultural country and this department must work very effectively. It is common feeling everywhere that this department does not give any benefit to the raiyats and the utility does not reach the rural area. The benefit derived is not commensurate with the huge amount we have been spending. Government say that this huge amount is spent on the ground that they are interested in growing more food so as to make the State self-sufficient. But, with great regret I have to say that our position remains the same in this behalf and the State is importing foodgrains from outside in large quantities. Crores of rupees have been spent for Grow More Food scheme but with no tangible result. We are depending on the Centre and other countries for our food requirements.

9-30 A.M.

Then, Sir, there is much scope for retrenchment in this department in many ways. For example, a sum of Rs. 33,53,000 has been allotted towards Development Schemes. If we go into it in detail, it is quite possible that we can dispense with many of these items.

See Page 16 of Budget Part II. I do not know why the provision for Tractor and Lorry services is retained. We have been spending nearly Rs. 8,62,000 on these tractors and lorry services. Probably you may remember that we have spent a considerable amount on these tractors. We have invested, I think, subject to correction, nearly Rs. 60 lakhs on tractors and bulldozers. High hopes were then held out that they would be beneficial to the raiyats. On the other hand we find that they are not as beneficial as we expected them to be. Many of them are out of service. Many raiyats who purchased them are disappointed. Even now provision is made, as much as Rs. 8,62,700. This is a big item of expenditure. It is high time this provision is deleted. I understand from Dr. Coleman who was here and who made an intensive tour has given a report in the matter. I have not got a copy of the report here with me but I was told that his opinion is that these tractors are not suited to the Mysore conditions and even for private owners.

Mr. SPEAKER.—This morning his statement has appeared in some papers so far as Malnad is concerned.

Sri J. MOHAMED IMAM.—Though we have spent a considerable amount on these tractors, it has not improved the condition of the common raiyat.

Again, we have spent a good deal of amount on multiplication and distribution of improved varieties of seeds. All these items of expenditure require to be reconsidered by Government. For example, under 'Food Production Drive' under 'Direction' we have been spending nearly Rs. 65,000. Under 'Staff for Grow More Food Works' we have spent Rs. 53,300; for tractor and lorry services Rs. 8,52,700.

	Rs.
Multiplication and distribution of improved varieties of seeds.	2,67,300
Manufacture and distribution of rural compost through town municipalities and village panchayets	1,42,300
Protective measures against pests and diseases	1,07,700
Preparation and distribution of manure mixture	2,68,200
Subsidy for the construction of Irrigation wells	3,75,000
Assessment of the result of Grow More Food	9,800
Schemes financed partly or wholly by other Governments or outside agencies	6,48,300

I think these are the items of expenditure which can be curtailed considerably, taking our financial position at present into consideration. Take for instance the manufacture and distribution of rural compost on which the Government propose to spend about Rs. 1,42,300. I am a villager. I am essentially an agriculturist. I take personal interest in agriculture. Your spending as much as Rs. 1,42,300 in no way helps us, the raiyats. The village raiyat knows how to prepare the compost. He prepares his own manure. Again, take the question of preparation and distribution of manure mixtures. You propose to spend Rs. 2 lakhs over it. It is a big amount. It seems to be an optional item. We would be justified in spending it during more affluent times. Therefore it is possible to delete that provision.

Then, take the item of subsidy for the construction of irrigation wells. We have already spent a good deal of amount by way of subsidy. I think we must have advanced some crores towards the sinking of wells. It is also common knowledge that in many cases this amount has been misutilised. It has given scope for corruption and misdealing. I feel personally that this requires scrutiny now and unless the Government satisfy themselves that this amount is going to be utilised properly, they will not be justified in spending this amount. They will be justified in stopping this amount also.

Again take the question of 'schemes financed partly or wholly by other Governments or outside agencies'. The amount comes to Rs. 6,48,300.

Dr. R. NAGAN GOWDA (Minister for Agriculture).—They are all research items.

Sri J. MOHAMED IMAM.—Research and other matters are already there for a long time. But now let us have as little of research as possible.

Sri A. BHEEMAPPA NAIK (Molakalmuru).—If the Hon'ble Member talks like that......

Sri J. MOHAMED IMAM.—Why don't you listen to me fully? Research is necessary. Let me go into the details now.

Dr. R. NAGAN GOWDA.—The details are given on page 24.

Sri J. MOHAMED IMAM.—Scheme for breeding of groundnuts, scheme for breeding thick sugarcane. Who advances for the scheme? Does the amount come from the Central Government? Then there is the pilot survey scheme for collecting statistics of cocoanuts, anti-mahalli (Koleroga) campaign scheme, cotton extension scheme, cocoanut nursery scheme, tuber scheme, establishment of arecanut research station, scheme for physiological research on Egyptian cotton in Mysore, multiplication of improved groundnut seeds, establishment of basic agricultural schools, soil survey scheme in Malnad, etc. A number of schemes there are like this. On basic agricultural schools

(Sri J. MOHAMED IMAM.)

scheme you want to spend Rs. 2,57,000. I do not know whether this is part of the recommendations of the Reforms Committee, namely, starting of basic agricultural schools. I am against this item. It requires examination, because it involves a recurring expenditure. What I want to submit is this: Agricultural Department is a very important department. If this department works well, certainly it will conduce to the betterment of the raiyat; it will contribute to the wealth of the raiyat. But what I want to know is whether this department should not work more vigilantly and more actively. If necessary, they must come in contact with every raiyat. (*A Voice*: There are no two opinions about that.) Every taluk has an agricultural inspector. But the work done by him is not as much as we expect him to do. These improved varieties of seeds and new methods of combating pests and diseases are not available to the raiyats in rural areas. We are spending huge amounts. Please scrutinise the entire expenditure and please cut down such of the items which can be avoided and which can be postponed to better days. Secondly, you must whip up the department and see that the utility of the department is derived by every raiyat. Let them go round and travel profusely. If there are improved varieties of seeds, instead of the raiyat coming to him, let the officer himself go to the raiyat and let him teach him what the improved varieties are. He must not only be a propagandist but also a teacher to the raiyat. He must approach some of the raiyats and tell them what the improved methods of cultivation are, what the improved seeds are and how to make use of the present resources. With these words I oppose the demand.

Sri A. BHEEMAPPA NAIK (Molakalmuru).—Sir, it has been my misfortune—I do not know why—to always oppose my Hon'ble friend Sri Imam.

Sri J. MOHAMED IMAM.—Because you get tickled.

Sri A. BHEEMAPPA NAIK.—My friend made a surprising statement that research work in the Agricultural Department must be stopped.

Sri J. MOHAMED IMAM.—On a point of order, Sir. My Hon'ble friend has the knack of misunderstanding me. I never said so. The member is not entitled to misquote or quote wrongly or to quote from his own imagination. He said that I wanted that research should be stopped. My idea was, these are all big items of expenditure, they must be scrutinised and whatever required must be retained. Take, for instance, the starting of basic agricultural schools. My friend in his anxiety or in his zeal to ventilate his own grievance always over-steps and perhaps he thinks that he will gain undue importance if he opposes me.

Sri A. BHEEMAPPA NAIK.—My friend's importance is not very much important to me at all, because I know what his importance today is.

Mr. SPEAKER.—The Hon'ble Member can come to the subject proper. He has understood him.

Sri A. BHEEMAPPA NAIK.—He must also know his position, Sir. Let my friend not think that he is an important person...

Mr. SPEAKER.—That is not the subject-matter now.

*Sri A. BHEEMAPPA NAIK.—I would say that the postponement of research work in the Agricultural Department is suicidal, whether the suggestion comes from the mouth of anybody else or from my mouth. The Department, if at all, has done some work on the research side of it. and the Government of India have been encouraging this research portion of it by giving huge grants. If a scientific department like Agriculture has to do some work for the people, it is only by this kind of improved seedling and giving better manure and improving the varieties of seeds and trying to develop this side of research in the department. Therefore I would very earnestly request the Government to see that the research department is improved, if necessary more funds being spent thereon. That is my opinion.

So far as the executive side is concerned, I feel that it has become almost a sales department rather than executive department. I have not seen the activities of any Assistant

*Asterisk indicates that the speech has not been revised by the Member concerned.

Director in any district or the activities of an agricultural inspector in any taluk in such a way as to improve the position of the raiyat, except selling some kulas or some manure. Except that nothing else is done. I have been saying this for the last three years and I have no objection to reiterate that even now. The presence of Assistant Director is not felt anywhere because he has not been useful to the raiyat. I do not know how many fields a year they inspect, what advice they give to the raiyats, how many public meetings of raiyats they hold and how many pest diseases are controlled by them. That is not known to anybody. If at all there is a department which is really needed for Mysore, which is mainly an agricultural country, it is this department. But unfortunately for us, though we spend heavily on it we do not get any proportionate benefit. It is more a spending department than an earning department. The sooner they remove the sales work from the hands of the inspectors and hand them over to the general public, the better it would be. How many cases of misappropriation there are, how much of public money is wasted on them! Why the scientific department should be entrusted with the sales of small things like manure and all that, I cannot understand. Therefore, what I feel is, this Agricultural Department must be given a whipping; they must be whipped up to work on the fields of villages.

Another thing is, spending so much as over Rs. 50 lakhs, they have not been able to make soil survey in the State. So long as you do not make a detailed soil survey take it from me that you can never improve agricultural production. Therefore, at whatever cost, it is very necessary that a detailed soil survey must be instituted and every raiyat must be advised as to the kind of crop he can grow, and where he can grow which kind of crop. This must be done like missionaries, going about and holding meetings and advising the raiyats and all that. That kind of activity we have not been seeing in the Agricultural Department. They say that the Japanese method of paddy cultivation is the best. But they themselves do not know how to prepare the seedling. These inspectors are not trained at all. What is the kind of manure that has to be put and what is the method of working, they do not know. If they themselves do not know, what instruction can they give to the raiyat? (*A Voice*: Not all; say, most of them.) Yes, most of them. They are not trained. Before sending them for training others, open training centres and give them training. Have you given them training? Have they raised these seedling beds? That is the position. Therefore I would once again state that these officers must be made to work on the fields. They are now simply officers to sell, officers to sit and nobody goes to them to ask for their advice and hence they do not come. That is the position.

Again, about the Agricultural College. Sir, it is a pitiable sight. If we go there, we see students are huddled in zinc-sheet sheds and are not given facilities. There is not sufficient place or building for laboratory. We call it a College and there is not even a librarian there. There is not even a laboratory for Chemistry there. Such a pitiable sight it has been reduced to. Perhaps Government thought that it would be better to abolish that college. It is not correct. Being an agricultural country, we need our young men not only to become officers in the Agricultural Department, but to learn agriculture for its own sake and improve their own lands.

Another point while at this juncture, I would like to state is this: B.Sc.'s in Agriculture are better than ordinary History graduates; but they are not entertained in schools and colleges as teachers nor are they taken in administrative services. If a History graduate is useful as Amildar, my opinion is that an Agricultural graduate would be more useful as Amildar. In fact, it must be stated to the credit of teachers in that College that the other day myself and the Hon'ble Leader of the Opposition, Sri Imam, visited that place and we saw that teachers are very anxious to give the best of training. It seems to me all the agricultural graduates from here have obtained first place in all-India

(SRI A. BHEEMAPPA NAIK.)

competitions. They have been sent abroad. Such a good training is given but facilities are not there. There is no place for students even to study. I do not know how the students manage to study in those small rooms and zinc sheet sheds. That has been the position, Sir.

I remember, Sir, the Government appointed a Committee in order to suggest a suitable place to locate this Agricultural College. That Committee went round the whole of India ; I do not know why this Committee should go about the whole of India to find out a place within Mysore State to locate the College. And they went to Coimbatore, they went to Poona and other places ; I do not know for what purpose. Afterwards, what happened, nobody knows. Whether they submitted their report, is not known. But still it is under controversy, whether it is better to locate the College at Shimoga, or Mandya or to allow it to remain where it is. Whatever it is, Sir, let us decide once for all. Whether it is, Mandya or any other place, it is going to serve the same good purpose. Are we not taking quick decisions in regard to a History college, for the extension of the college by including C B Z or whatever it is ? We are going to open colleges after colleges. I do not know what has happened to those colleges. I have only the fervent hope that with Dr. Nagan Gowda as Minister of the Department, the Department will show rapid signs of improvement and increase its utility value to the raiyat on the field. Dr. Nagan Gowda is not merely an agriculturist, but also a scientist and therefore I have every hope that he will make this Department serve the interest of agriculture in a much better way than it is doing at present. I also expect him to see that the location of this Agricultural College is decided upon immediately and urgent decisions are taken about improvements to be effected to that College. When I went there, I saw about 200 or 300 or 400 benches being huddled in a room having no place to put them. Laboratory materials are being huddled up in rooms having no place. Only they bring one or two things to the classes, show them in the classes and take them back. That is the position. Would that be useful to anybody ? Would that state of affairs bring credit to any college worth the name, I ask ? Therefore I would suggest that the present Agriculture Minister should undertake a thorough cleansing of this house, I mean the Agricultural Department, not this august House. (*Laughter*). There is the growth of several weeds. He must see that all these weeds are weeded out and better work is turned out by this Department. So far as research work is concerned, Sir, I once again plead that there should be all round improvement for this research work and better facilities should be accorded for research work in the College. I would even suggest that this Department should not interest itself in the sales work, but it should concentrate on research work and prove itself more useful to the agriculturist as such.

ಶ್ರೀ ಕೆ. ಲಕ್ಕಪ್ಪ (ಚೆನ್ನರಾಯಪಟ್ಟಣ).—ಸರ್ಕಾರದವರು ಈ ವ್ಯವಸಾಯದ ಇಲಾಖೆಗೆ ವರ್ಷೇ ವರ್ಷೇ ಅಪಾರ ಹಣವನ್ನು ಖರ್ಚುಮಾಡುತ್ತಾ ಇದ್ದಾರೆ. ಪ್ರಸಕ್ತಸಾಲಿಗೆ ಸುಮಾರು 58 ಲಕ್ಷ ರೂಪಾಯಿಗಳಷ್ಟು ಹಣವನ್ನು ಒದಗಿಸಿದ್ದಾರೆ. ಇಷ್ಟು ಹಣವನ್ನು ವರ್ಷೇ ವರ್ಷೇ ಒದಗಿಸಿ ಕೆಲಸ ನಡೆಸುತ್ತಾ ಇದ್ದರೂ ಸಹ ಶ್ರೀಮಾನ್ ಭೀಮಪ್ಪನಾಯಕರು ಮತ್ತು ಇಮಾಂ ಸಾಹೇಬರು ಹೇಳಿದಹಾಗೆ ವ್ಯವಸಾಯ ಕ್ಷೇತ್ರಗಳಲ್ಲಿ ರೈತರಿಗೆ ಎಷ್ಟು ಅನುಕೂಲವಾಗಬೇಕಾಗಿತ್ತೋ ಅಷ್ಟು ಅನುಕೂಲವಾಗಿಲ್ಲ ಎಂಬುದು ನಮಗೆ ಕಾಣುತ್ತಾ ಇದೆ, ಮತ್ತು ರೈತರೂ ಸಹ ಹೇಳುತ್ತಾ ಇದ್ದಾರೆ. ಕಳೆದ ಸಾಲಿನಿಂದ ಸಂಸ್ಥಾನಾದ್ಯಂತ Japanese method of paddy cultivation ನನ್ನು ಪ್ರಚಾರಮಾಡುತ್ತಾ ಇದ್ದೀರಿ. ಕಳೆದ ಸಾಲಿನಲ್ಲಿ ಸುಮಾರು 26 ಸಾವಿರ ಎಕರೆಗಳಲ್ಲಿ ಜಪಾನ್ ಪದ್ಧತಿ ಮೇರೆಗೆ ಬತ್ತವನ್ನು ಹಾಕಿ ಬೆಳೆದಿದ್ದಾರೆ. ಇದನ್ನು ನೋಡಿದ ರೈತರು, ನಿಜವಾಗಿಯೂ - ಈ ಪದ್ಧತಿಯನ್ನು ಅನುಸರಿಸಿದರೆ ಇದರಿಂದ ಬಹಳ ಉಪಕಾರ ಇದೆ. ಇದು ಏನೋ ಒಂದು ಹೊಸ ಪದ್ಧತಿಯನ್ನು ಡಿಪಾರ್ಟ್‌ಮೆಂಟಿನವರು ನಮಗೆ ತೋರಿಸುತ್ತಾ ಇದ್ದಾರೆ, ಇದರಲ್ಲಿ ಗುಣ ಕಾಣುತ್ತಾ ಇದೆ, ಇದನ್ನು ಅನುಸರಿಸೋಣ ಎಂಬ ಭಾವನೆ ಅವರಲ್ಲಿ ಬರುತ್ತಾ ಇದೆ. ಇಂಥಾ ಸನ್ನಿವೇಶವನ್ನು ಸದುಪಯೋಗಪಡಿಸಿಕೊಂಡು Japanese method of paddy cultivationನನ್ನು ಪುನಃ ಪೂರ್ವಕವಾಗಿ, ಹೆಚ್ಚು ಅಸಕ್ತಿಯಿಂದ, ಉತ್ಸಾಹದಿಂದ ಪ್ರಚಾರಮಾಡಿ ಸಂಸ್ಥಾನಾದ್ಯಂತ ಹೆಚ್ಚು ಹೆಚ್ಚಾಗಿ ಆ ಪ್ರಯೋಗವನ್ನು ತರಲಿಕ್ಕೆ ಸರ್ಕಾರ ಪ್ರಯತ್ನಪಟ್ಟರೆ, ರೈತರಲ್ಲಿ ನಿಜವಾಗಿಯೂ ಡಿಪಾರ್ಟ್‌ಮೆಂಟಿನವರು ನಮಗೆ ಒಳ್ಳೆಯ ಕೆಲಸಮಾಡಿಕೊಡುತ್ತಾ ಇದ್ದಾರೆ ಎಂಬ ಒಂದು ನಂಬಿಕೆ ಬರುವುದಕ್ಕೆ ಅವಕಾಶವಾಗುತ್ತದೆ. ಈ ಅವಕಾಶವನ್ನು ಸರ್ಕಾರದವರು ಉಪ

ಯೋಗಿಸಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಸಾಲಿನಲ್ಲಿ ನಡೆದಂಥ ಈ ಪ್ರಯೋಗದಲ್ಲಿ ನಾನು ಮೊದಲೇ ಹೇಳಿದ ಹಾಗೆ 26,000 ಎಕರೆಗಳಲ್ಲಿ ಬತ್ತ ಬೆಳೆದಿದ್ದಾರೆ. ಈ ಪ್ರಯೋಗ ನಡೆದು ಒಂದು ಎಕರೆಯಿಂದ ಆದ ಉತ್ಪನ್ನದ ಲೆಕ್ಕ ಇಟ್ಟುಕೊಂಡಿದಾರೆ. ಈ ಲೆಕ್ಕ ಇಟ್ಟುಕೊಂಡಿರುವ ಪ್ರಕಾರ ಇದನ್ನು ನೋಡಿದರೆ ಈ ಪದ್ಧತಿಯಿಂದ ಬಹಳ ಉಪಯೋಗವಾಗಿದೆ, ಹೆಚ್ಚು ಬೆಳೆಯುವುದಕ್ಕೂ ಕೂಡ ಅವಕಾಶ ಇದೆ, ಹೆಚ್ಚು ಆದಾಯ ಹೊಂದುವುದಕ್ಕೂ ಅವಕಾಶ ಇದೆ ಎಂಬುದು ಖಚಿತವಾಗಿ ಕಂಡುಬರುತ್ತದೆ. ನಮ್ಮ ಜಿಲ್ಲೆಯಲ್ಲಿ ನಡೆದ ಪ್ರಯೋಗದಲ್ಲಿ ಎಲ್ಲವನ್ನೂ ಪರೀಕ್ಷೆಮಾಡಿ ನೋಡಿದ್ದರಲ್ಲಿ ಶ್ರೀಮಾನ್ ಜವರೇಗೌಡರು ಎಂಬುವವರು ಒಂದು ಎಕರೆಯಲ್ಲಿ ಸುಮಾರು 55 ಪಲ್ಲಾದಷ್ಟು ಬತ್ತವನ್ನು ಬೆಳೆದಿದ್ದಾರೆ. ಅದೇ ತಾಲ್ಲೂಕಿನಲ್ಲಿ ಇನ್ನೊಬ್ಬರು ಸುಮಾಗು 50 ಪಲ್ಲ ಬೆಳೆದಿದ್ದಾರೆ. ಹೀಗೆಯೇ ಬೆಂಗಳೂರು ಜಿಲ್ಲೆ ತೆಗೆದುಕೊಂಡರೆ ಪಟೇಲ್ ಸಿದ್ದೇಗೌಡರು ಎಂಬುವವರು 9,275 ಪೌಂಡ್‌ನಷ್ಟು ಬತ್ತ ಬೆಳೆದಿದ್ದಾರೆ. ಶಿವಮೊಗ್ಗದಲ್ಲಿ 8,550 ಪೌಂಡ್ ಬೆಳೆದಿದ್ದಾರೆ. ಮೈಸೂರಿನಲ್ಲಿ 8,400 ಪೌಂಡ್ ಬೆಳೆದಿದ್ದಾರೆ. ಮಂಡ್ಯದಲ್ಲಿ ಅಕ್ಕಿ ಹೆಬ್ಬಾಳ್ ಸಿದ್ದೇಗೌಡರು ಎಂಬುವವರು 8,315 ಪೌಂಡ್ ಬತ್ತವನ್ನು ಬೆಳೆದಿದ್ದಾರೆ. ಇದನ್ನು ನೋಡಿದರೆ ಈಗ ನಾವು ಹಾಲಿ ಎಷ್ಟು ಪಲ್ಲಾ ಬತ್ತ ಬೆಳೆಯುತ್ತಾ ಇದ್ದೇವೆಯೋ ಅದಕ್ಕಿಂತ ಕನಿಷ್ಟಪಕ್ಷ ಹೆಚ್ಚು ನಿಗಾ ತೆಗೆದುಕೊಂಡು ವ್ಯವಸಾಯ ಮಾಡದೇ ಇದ್ದರೂ ಸಹ ಒಂದಕ್ಕೆ ಎರಡರಷ್ಟು ಬೆಳೆಯುವುದಕ್ಕೆ ಸಾಧ್ಯ ಎಂಬುದು ಅಂಕಿಅಂಶಗಳಿಂದ ಕಂಡು ಬರುತ್ತಾ ಇದೆ. ನಮ್ಮ ಮೈಸೂರು ಸಂಸ್ಥಾನದ ಇಂದಿನ ಒಟ್ಟು ಸರಾಸರಿ ತೆಗೆದುಕೊಂಡರೆ ಒಂದು ಎಕರೆಗೆ $9\frac{1}{4}$ ಪಲ್ಲಾದಷ್ಟು ಬತ್ತ ಬೆಳೆಯುತ್ತಾ ಇರುವುದು ನಮಗೆ ಗೊತ್ತಿದೆ. ಜಪಾನ್ ಮೆಥೆಡ್ ಪ್ರಕಾರ ಈಗ ಬೆಳೆದಿರತಕ್ಕ 26 ಸಾವಿರ ಎಕರೆಗಳ ಸರಾಸರಿ ತೆಗೆದುಕೊಂಡರೆ ಕೊನೇಪಕ್ಷ ಹೆಚ್ಚು ನಿಗಾ ತೆಗೆದುಕೊಳ್ಳದೆ ಎಷ್ಟೇ ಅಡ್ಡಾದಿಡ್ಡಿಯಾಗಿ ಮಾಡಿದರೂ ಸಹ ಒಂದಕ್ಕೆ ಎರಡರಷ್ಟು ಬೆಳೆಯಬಹುದು ಎಂದು ಗೊತ್ತಾಗಿದೆ. $9\frac{1}{4}$ ಪಲ್ಲಾದಿಂದ ಸುಮಾರು 18 ಪಲ್ಲಗಳವರೆಗೂ ಸುಲಭವಾಗಿ ಬೆಳೆಯುವುದಕ್ಕೆ ಅವಕಾಶವಿದೆ ಎಂಬುದು ಗೊತ್ತಾಗುತ್ತಾ ಇದೆ. ಜೊತೆಗೆ ಒಂದು ಎಕರೆಗೆ ಎಷ್ಟೇ ಕೆಳದರ್ಜೆಯಲ್ಲಿ ಮಾಡಿದರೂ ಸಹ ಸುಮಾರು 100 ರೂಪಾಯಿಗಳಷ್ಟು ಜಾಸ್ತಿ ಆದಾಯ ಪಡೆಯುವುದಕ್ಕೆ ಅವಕಾಶವಿದೆ ಎಂಬುದು ಅಂಕಿಅಂಶಗಳಿಂದ ಗೊತ್ತಾಗುತ್ತಾ ಇದೆ. ಇದನ್ನು ರೈತರು ಈಗಾಗಲೇ ಚೆನ್ನಾಗಿ ಅನುಭವಕ್ಕೆ ತೆಗೆದುಕೊಂಡು ಎಲ್ಲಾ ಕಡೆಯಲ್ಲೂ ಜಾರಿಗೆ ತರುವುದಕ್ಕೆ ಆಸಕ್ತರಾಗಿದ್ದಾರೆ. ಈ ರೀತಿ ಮಾಡೋಣ ಎಂಬ ಮನೋಭಾವ ಜನಗಳಲ್ಲಿ ಬಂದಿದೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು, ಕಳೆದ ಸಾಲಿನಲ್ಲಿ ಸುಮಾರು 26 ಸಾವಿರ ಎಕರೆಗಳಲ್ಲಿ ಪ್ರಯೋಗಮಾಡಿದ್ದಾರೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು, ಇನ್‌ಟೆನ್‌ಸಿವ್ ಆಗಿ ಕೆಲಸ ಮಾಡುವುದಕ್ಕೆ ಪ್ರಯತ್ನಪಟ್ಟರೆ ಖಂಡಿತವಾಗಿಯೂ ರೈತರಿಗೆ ಪ್ರಯೋಜನವಾಗುತ್ತದೆ ಮತ್ತು ದೇಶಕ್ಕೂ ಸಹ ಪ್ರಯೋಜನವಾಗುತ್ತದೆ. ಮೇಲಾಗಿ ನಮ್ಮ ಸಂಸ್ಥಾನದಲ್ಲಿ ರಾಗಿ ಸಾಕಾದಷ್ಟು ಇದೆ, ನಮಗೆ ಬತ್ತ ಬೇಕು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಕ್ಷೇತ್ರದಲ್ಲಿ ಹೆಚ್ಚು ಉತ್ಸಾಹ, ಆಸಕ್ತಿ ತೋರಿಸುವುದು ಅವಶ್ಯಕ. ಈ ದೃಷ್ಟಿಯಿಂದ ಈ ವರ್ಷ ಕಳೆದ ಸಾಲಿಗಿಂತಲೂ ಮೂರರಷ್ಟಾದರೂ ಫಾಸಲೆ ಜಾಸ್ತಿ ಇಟ್ಟುಕೊಂಡು, ವ್ಯವಸಾಯದ ಇಲಾಖೆಯ ಅಧಿಕಾರಿಗಳೂ ಸಹ ಇದರಲ್ಲಿ ಶ್ರದ್ಧೆ ವಹಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡುವುದಾದರೆ ಆಗ ನಿಜವಾಗಿಯೂ ಸಹ ಈ ವ್ಯವಸಾಯದ ಕ್ಷೇತ್ರದಲ್ಲಿ, ವ್ಯವಸಾಯದ ಇಲಾಖೆಯಿಂದ ಜನಗಳಿಗೆ ಹೆಚ್ಚು ಅನುಕೂಲ ಒದಗಿದ ಹಾಗಾಗುತ್ತದೆ. ರೈತರೂ ಸಹ ತಮ್ಮ ಆರ್ಥಿಕ ಸ್ಥಿತಿಯನ್ನು ಹೆಚ್ಚುಮಾಡಿಕೊಳ್ಳುವುದಕ್ಕೆ ಒಂದು ಅವಕಾಶವಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಈ ವಿಚಾರದಲ್ಲಿ ಪ್ರೋತ್ಸಾಹ ಕೊಡುವ ಸಂದರ್ಭದಲ್ಲಿ ಜಪಾನ್ ಮೆಥೆಡ್ ಪ್ರಕಾರ ಬತ್ತ ಬೆಳೆಯಬೇಕಾದರೆ ರೈತರಿಗೆ ಹೆಚ್ಚಾಗಿ ಗೊಬ್ಬರ ಕೊಡಬೇಕಾದ್ದು ಆವಶ್ಯಕ. ಈ ರೀತಿಯಾಗಿ ಕೊಡದಿದ್ದರೆ ಹೆಚ್ಚು ಪ್ರದೇಶದಲ್ಲಿ ವ್ಯವಸಾಯ ಮಾಡಿ ಉತ್ತಮವಾದ ಫಲ ದೊರಕಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ರೈತರಿಗೆ ಕೆಮಿಕಲ್ ಮೆನ್ಯೂರ್ ಹೆಚ್ಚಾಗಿ ಕೊಡಬೇಕು.

ಇದಲ್ಲದೆ ಎಲ್ಲರಿಗೂ ರೈತನ ಆರ್ಥಿಕ ಸ್ಥಿತಿ ಹೀನಸ್ಥಿತಿಯಲ್ಲಿರುವುದು ಗೊತ್ತಿರುವುದರಿಂದ, ಮತ್ತು ಕೊಳ್ಳುವ ಶಕ್ತಿ ರೈತರಿಗೆ ಕಡಮೆಯಾಗಿರುವುದರಿಂದ ಅವರಿಗೆ ಹಣ ಸಹಾಯ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಗೊಬ್ಬರ ಕೊಡುವಾಗ ಅದನ್ನು ಸಾಲದ ರೂಪದಲ್ಲಿ ಕೊಟ್ಟರೆ ವಾಪಸು ಪಡೆಯಲು ತಕ್ಕ ಏರ್ಪಾಡು ಮಾಡಬೇಕು. ಹೆಚ್ಚಾಗಿ ಕೆಮಿಕಲ್ ಮೆನ್ಯೂರ್, ಹೊರಗಿನಿಂದ ತರಿಸಿ ಸಾಲ ಕೊಟ್ಟು ಪ್ರಯೋಗ ಮಾಡಿದರೆ ಖಂಡಿತವಾಗಿಯೂ ಬಹಳ ಉತ್ತಮವಾದ ಉತ್ಪನ್ನವಾಗಿ ಹೆಚ್ಚು ಬತ್ತ ಬೆಳೆಯಲು ಅವಕಾಶವಾಗಿ ಆಹಾರ ಪರಿಸ್ಥಿತಿಯೂ ಬಹಳ ಮಟ್ಟಿಗೆ ಉತ್ತಮವಾಗಲು ಅವಕಾಶವಾಗುತ್ತದೆ. ಇದನ್ನೆಲ್ಲಾ ಗಮನಿಸಿ ಸರ್ಕಾರ ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಸೂಚಿಸುತ್ತೇನೆ.

The House then adjourned for Lunch at Ten of the Clock and reassembled at Thirty Minutes past Ten of the Clock.

[MR. SPEAKER in the Chair]

Mr. SPEAKER.—We have thirty minutes at our disposal. At least ten minutes must be given for reply by the Government. So, let each member take only five minutes and four members may speak.

Sri S. SRINIVASA IYENGAR (T. Narsipur).—Mr. Speaker, the administration of the Agricultural Department is far from satisfactory. The most important functions in the Agricultural Department are—

(1) Soil Survey,

(2) Propaganda and Demonstration work,

(SRI S. SRINIVASA IYENGAR.)

(3) Starting Demonstration Farms in Taluk Headquarters,

(4) Multiplication and Distribution of improved varieties of seeds,

(5) Protective Measures against pests and diseases.

Well, Sir, so far as the Government of Mysore is concerned, I would like to analyse how the Agricultural Department is acting in regard to these important functions.

For the soil survey the Government of Mysore have made an allotment of Rs. 15,240 only out of an allotment of Rs. 52.73 lakhs for the Department. In Mysore we have 82.63 lakhs of acres of cultivable land and the allotment made towards soil survey under Development Scheme is just a sum of Rs. 15,240. Sir, I would like to place before the Government that when soil survey is done, the department will know how the chemical manure will act on the soil. It is highly criminal to allow the use of chemical manure for all soil. I have bitter experience of this chemical manure. Many soils do not properly act to the chemical manure and it will have a deteriorating effect. So, I stress, as Sri Bheemappa Naik has already done, that it is the soil survey which is the most important function of the Agricultural Department. It serves to educate the cultivator. But this most important function has been absolutely ignored by the Government.

The second most important function of the Department that I spoke of was, intensive propaganda and demonstration work throughout the State. In the year 1954-55 Government are satisfied in having an allotment of Rs. 40,000 only towards this function, but that allotment is towards contingency. I would like to know what exactly Government mean by contingency so far as this Demonstration and Propaganda is concerned. Out of the total allotment of Rs. 5.68 lakhs towards this item, how is this amount used? It is simply spent for the agricultural staff in the taluk headquarters. Let us see, what the Agricultural Inspector is doing in the taluk headquarters? He is just an accountant submitting voluminous reports, filling up *pro forma* accounts and nothing else. There are agricultural implements stored with these officers, not being bought by anybody, the price being abnormal. The present market rate of those implements would be cheaper. So, it is a very serious defect of maintaining the Inspector at the headquarter at a cost of Rs. 5.68 lakhs out of this head of account and doing nothing towards propaganda work. I can never understand this.

Sir, the third most important function that I spoke of is starting Demonstration Farms at Taluk Headquarters. The heading, no doubt, looks very rosy and any outsider that sees the heading will at once be impressed that we are far advanced in this field. But what has actually happened in 1952-53 for this important function is, they have spent Rs. 2,080 for the whole State. 1953-54, the revised estimate shows they are satisfied with an expenditure of Rs. 100; and in 1954-55 there is no allotment. What a progress it is!

The next thing is multiplication and distribution of improved seeds. In the year 1954-55 the allotment is 2.67 lakhs and taking into consideration the acreage under cultivation this allotment is insufficient. Sir, I submit that the department should be managed efficiently. Instead of simply being contented with the present arrangement, I urge that the Government should see that they spend the money in such a manner as to educate the cultivator about the improved methods of agriculture and increase his revenues. Government have already lost five lakhs in the distribution of manure last year. Let not that loss continue any further.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಮೈಸೂರು ಸರ್ಕಾರದವರು ವ್ಯವಸಾಯದ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿರುವ 50 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಹಣ ಈಗಿನ ಪರಿಸ್ಥಿತಿಯಲ್ಲಿ ದೇಶಾಭಿವೃದ್ಧಿಗೆ ಬಹಳ ಮುಖ್ಯವಾದುದೆಂದು, ಎಲ್ಲರೂ ಕೂಡ ಎಲ್ಲಾ ಸಂದರ್ಭಗಳಲ್ಲೂ ಹೇಳುತ್ತಿರುವಾಗ ವಿರೋಧ ಪಕ್ಷದ ನಾಯಕರು ಈ ಡಿಮ್ಯಾಂಡಿನ ಬಗ್ಗೆ ಯಾವ ಉದ್ದೇಶದಿಂದ ವಿರೋಧಿಸಿದರೆಂಬುದು ನನಗೆ ಅರ್ಥವಾಗಲಲ್ಲ. ಅವರು ಕೆಲವು ಅಭಿಪ್ರಾಯಗಳನ್ನು ಸಭೆಯ ಗಮನಕ್ಕೆ

ತರುತ್ತಾ ರೂರಲ್ ಕಾಂಪೋಸ್ಟ್ ರಿಸರ್ಚ್ ಬಗ್ಗೆ ಖರ್ಚು ಮಾಡುವುದು ಮತ್ತು ಸಬ್ಸಿಡಿ ಫಾರ್ ಇರಿಗೇಷನ್ ವೆಲ್ಸ್ ಎಂದು ಕೆಲವು ಬಾಬುಗಳಿಗೆ ಖರ್ಚು ಮಾಡುವ ಹಣ ಅಷ್ಟಾಗಿ ಸದುಪಯೋಗವಾಗುತ್ತಿಲ್ಲವೆಂದು ಹೇಳಿದರು. ಆದರೆ ನಾನು ಅವರು ಹಾಗೆ ಹೇಳುವಾಗ ಅನುಭವವಿರುವವನು ಮತ್ತು ರೈತ ವರ್ಗಕ್ಕೆ ಸೇರಿದವನು ಎಂದು ಹೆಚ್ಚಾಗಿ ಕ್ಲೈಮ್ ಮಾಡತಕ್ಕ ಹಕ್ಕು ನನಗಿದೆಯೆನ್ನಿಸುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ನನ್ನ ಅನುಭವದಿಂದ ಸಬ್ಸಿಡಿ ಫಾರ್ ಇರಿಗೇಷನ್ ವೆಲ್ಸ್, ಗೊಬ್ಬರ, ಸಾಲ ಮುಂತಾದುವುಗಳಿಗೆ ನೀಡುವ ಸಹಾಯವನ್ನು ಬಡವರು ಮತ್ತು ರೈತವರ್ಗದವರು ಸ್ವಲ್ಪಮಟ್ಟಿಗೆ ದುರುಪಯೋಗ ಮತ್ತು ಸದುಪಯೋಗ ಪಡಿಸಿಕೊಳ್ಳದಿರುವ ಉದಾಹರಣೆ ಹೇಳುತ್ತೇನೆ. ಇತ್ತೀಚೆಗೆ ವ್ಯವಸಾಯದ ಇಲಾಖೆ ಈ ಬಗ್ಗೆ ಕೊಡುವ ಸೌಲಭ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಬುದ್ಧಿ ರೈತರಿಗೆ ಬಂದಿದೆ. ಹೆಚ್ಚು ಹೆಚ್ಚಾಗಿ ರೈತವರ್ಗದವರು ಕೆಲವು ವರ್ಷಗಳಲ್ಲಿ ಉತ್ತಮ ವ್ಯವಸಾಯ ಮಾಡುವ ಸ್ಥಿತಿಗೆ ಬರುತ್ತಾರೆಂಬುದರಲ್ಲಿ ಅನುಮಾನವಿಲ್ಲ, ಇದು ನಿರ್ವಿವಾದವಾದುದು ಎಂದು ದೃಢವಾಗಿ ಹೇಳಬಹುದು.

ಹಾಗೆಯೇ ಟ್ರಾಕ್ಟರ್ ಸರ್ವಿಸ್ ಬಗ್ಗೆ ಡಾ|| ಕೋಲ್ಮನ್‌ರವರ ಉದಾಹರಣೆ ಹೇಳಿದರು. ಅವರು ಸರ್ವೇಸಾಧಾರಣವಾಗಿರುವ ರೈತ ಹೆಚ್ಚು ಪ್ರಮಾಣದಲ್ಲಿ ಟ್ರ್ಯಾಕ್ಟರನ್ನುಪಯೋಗಿಸಿಕೊಳ್ಳಲು ಅವನಿಗೆ ಸಾಕಾದಷ್ಟು ಜಮೀನು ಮತ್ತು ಬಂಡವಾಳವಿಲ್ಲವೆಂದು ಹೇಳಿದ್ದಾರೆಯೇ ವಿನಾ ಸರ್ಕಾರ ಮೇಂಟೈನ್ ಮಾಡುವ ಬಗ್ಗೆ, ದೊಡ್ಡ ದೊಡ್ಡ ಕೆಲಸಗಳಿಗೆ ಟ್ರ್ಯಾಕ್ಟರನ್ನು ಉಪಯೋಗಿಸುವ ಬಗ್ಗೆ ಏನೂ ಹೇಳಲಿಲ್ಲ. ತುಂಗಭದ್ರ ಅಣೆಕಟ್ಟು ಮತ್ತು ತುಂಗಭದ್ರ ರಿಸರ್ವಾಯರ್ ಪೂರ್ಣವಾಗಿರುವುದರಿಂದ, ಭದ್ರ ರಿಸರ್ವಾಯರ್ ಆಗುತ್ತಿರುವುದರಿಂದ. ಇನ್ನೂ ಅನೇಕ ಮೇಜರ್ ಮತ್ತು ಮೈನರ್ ಇರಿಗೇಷನ್ ಕೆಲಸಗಳು ವಿಶಾಲವಾಗಿರುವುದರಿಂದ, ಅನೇಕ ಕಡೆ ಹಳ್ಳಕೊಳ್ಳಗಳಿರುವುದನ್ನು ತೆಗೆದು ಜಮೀನು ಸಮ ಮಾಡಬೇಕಾಗಿರುವುದರಿಂದ ಮತ್ತು ಆ ಜಮೀನನ್ನು ಸಾಗಿಗೆ ಯೋಗ್ಯವಾಗಿ ಮಾಡಬೇಕಾದರೆ ಬುಲ್‌ಡೋಜರು, ಟ್ರ್ಯಾಕ್ಟರು ಅಗತ್ಯವಾದ್ದರಿಂದ, ಸಾಧಾರಣವಾಗಿ ದೊಡ್ಡ ಕೆಲಸಗಳು ರೈತರು ಮಾಡಲು ಸಾಧ್ಯವಾಗದಿರುವುದರಿಂದ ಸರ್ಕಾರದವರು ಈ ಯಾವ ಸಂದರ್ಭಗಳಲ್ಲಿ ಕೂಡ ಬುಲ್‌ಡೋಜರು, ಟ್ರಾಕ್ಟರು ಮುಂತಾದುವನ್ನು ಮೇಂಟೈನ್ ಮಾಡಬೇಕಾದ್ದು ಅತ್ಯಾವಶ್ಯಕ.

ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಮುಖ್ಯವಾಗಿ ಬೆಂಕಿರೋಗ ಬಂದು ಬೆಳೆ ಹಾಳಾಗುತ್ತಿರುವ ವಿಚಾರ ಹೇಳಿದರು. ಅದನ್ನು ನಿವಾರಣೆ ಮಾಡಲು ಸಾಕಾದಷ್ಟು ಪ್ರಮಾಣದಲ್ಲಿ ಅಧಿಕಾರಿಗಳು ನಿಗಾ ಕೊಡುತ್ತಿಲ್ಲ, ಅದಕ್ಕೆ ಬಡ್ಜೆಟ್ಟಿನಲ್ಲಿ ಹಣ ಸಾಕಷ್ಟು ಒದಗಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ರೈತರು ಎಷ್ಟು ಚೆನ್ನಾಗಿ ಆರಂಭ ಮಾಡಿದರೂ ಕೂಡ ಈ ರೋಗದ ಹಾವಳಿಯಿಂದ ಬೆಳೆ ನಷ್ಟವಾಗಿ ಅವರಿಗೆ ಬಹಳ ಲುಕ್ಸಾನಾಗುತ್ತಿವೆ. ಕಾರಣ ಅವರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಒಳ್ಳೆ ಬೆಳೆ ಕೈಗೆ ಬರುವ ಸಮಯದಲ್ಲಿ, ಹೆಚ್ಚು ಬತ್ತ ಬೆಳೆಯಾಗುವ ಸಂದರ್ಭದಲ್ಲಿ, ಆ ಬೆಳೆಗೆ ಬೆಂಕಿರೋಗ ಬದ್ದು ಬೆಳೆ ಹಾಳಾಗುತ್ತಿದೆ. ಸರ್ಕಾರ ಇದನ್ನು ನಿವಾರಣೆ ಮಾಡಿ ಅದಕ್ಕೆ ಸರಿಯಾದ ಪರಿಹಾರ ಕಲ್ಪಿಸಬೇಕಾದ್ದು ಅವರ ಕರ್ತವ್ಯ. ಆದ್ದರಿಂದ ಹೆಚ್ಚಿನ ಪ್ರಾಪೊಗ್ಯಾಂಡ ಮಾಡಿ ರೈತನ ಮನಸ್ಸನ್ನು ಇಲಾಖೆಕಡೆ ಎಳೆದರೆ ಜಾಗ್ರತೆ ವ್ಯವಸಾಯದ ಇಲಾಖೆ ಹೆಚ್ಚಿನ ಕಳಕಳಿಯಿಂದ ಕೆಲಸ ಮಾಡಲು ಅವಕಾಶವಾಗುತ್ತದೆಂಬುದನ್ನು ಸರ್ಕಾರದ ಗಮನಕ್ಕೆ ತಂದು ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಈ ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಕೆಲವು ಮಿತ್ರರು ಇದರಿಂದೇನೂ ಪ್ರಯೋಜನವಿಲ್ಲವೇ ಇಲ್ಲವೆಂದು ಹೇಳತಕ್ಕಂಥ ರೀತಿಯಲ್ಲಿ ಮಾತನಾಡುವುದು ಈಗಿನ ಸಂದರ್ಭದಲ್ಲಂತೂ ಬಹಳ ವಿಷಾದಕರ. ನೇಷನ್ ಬಿಲ್ಡಿಂಗ್ ಡಿಪಾರ್ಟ್‌ಮೆಂಟೆಂದು ಏನಿದೆಯೋ ಅದರಲ್ಲಿ ಪ್ರಥಮ ಸ್ಥಾನ ಈ ವ್ಯವಸಾಯದ ಇಲಾಖೆಗೆ ಕೊಡಬೇಕೆಂದು ಹೇಳುವುದರಲ್ಲಿ ಏನೂ ಅನುಮಾನವಿಲ್ಲ. ಪ್ಲಾನಿಂಗ್ ಕಮಿಷನವರೂ ಕೂಡ ವ್ಯವಸಾಯಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಆದ್ದರಿಂದ ಈ ಇಲಾಖೆಯಿಂದೇನೂ ಪ್ರಯೋಜನವಿಲ್ಲವೆಂದು ಹೇಳುವ ರೀತಿಯಲ್ಲಿ ನಮ್ಮ ಶ್ರೀ ಇಮಾಂರವರೂ ಮತ್ತು ನಮ್ಮ ಲೀಡರ್‌ರವರೂ ಕೂಡ ಒಂದೆರಡು ಸಲ ಮಾತನಾಡಿರುವುದು ಬಹಳ ವಿಷಾದಕರ. ಇದಕ್ಕೆ ಅವಕಾಶವಿರಬಾರದು. ಇಲಾಖೆಯಲ್ಲಿ ನ್ಯೂನತೆ ಇರಬಹುದು. ಅದನ್ನು ಸರಿಪಡಿಸಿ ಅದರಿಂದ ಹೆಚ್ಚು ಜನರಿಗೆ ಸಹಾಯವಾಗುವಂತೆ ಮಾಡಬೇಕು.

ಶ್ರೀ ಎಲ್. ಸಿದ್ದಪ್ಪ.—ಶ್ರೀ ಇಮಾಂ ಮತ್ತು ಇನ್ನೊಬ್ಬರು ಎಂದು ಹೇಳಿದರು. ಆ ಇನ್ನೊಬ್ಬರು ಯಾರು ?

ಶ್ರೀ ವಿ. ವೆಂಕಟಪ್ಪ.—ಲೀಡರ್ ಆಫ್ ದಿ ಹೌಸ್ ಮಳವಳ್ಳಿಯಲ್ಲಿ ಅವರು ಹೋದವರ್ಷ ಭಾಷಣ ಮಾಡಿದಾಗ ಈ ಇಲಾಖೆಯಿಂದ ಯಾವ ಪ್ರಯೋಜನವೂ ಇಲ್ಲ, ಆದುದರಿಂದ ಇಲಾಖೆಯನ್ನೇ ತೆಗೆಯಬೇಕೆಂದು ಹೇಳಿದಂತೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದುದನ್ನು ನೋಡಿ ವಿಷಾದವಾಯಿತು. ಆ ರೀತಿಯಾಗಿ ಮಾಡಬಾರದು ಮತ್ತು ಇದರ ಅನುಕೂಲವನ್ನು ಹೆಚ್ಚಿಸಲು ಏನು ಬೇಕೋ ಅದನ್ನು ಮಾಡಬೇಕು. ಅದರಲ್ಲೂ ಈಗ ಈ ಇಲಾಖೆಯಲ್ಲಿ ಪರಿಣತರಾದ ಡಾ|| ನಾಗನಗೌಡರು ನಮ್ಮಲ್ಲಿದ್ದಾರೆ. ಅಮೇರಿಕಾದಲ್ಲಿ ಅಗ್ರಿಕಲ್ಚರ್ ಕಾಲೇಜುಗಳು ಬಹಳವಾಗಿವೆ. ನಮ್ಮ ದೇಶದಲ್ಲಿಯೂ ಅಗ್ರಿಕಲ್ಚರಲ್ ಕಾಲೇಜುಗಳು ಹೆಚ್ಚಾಗಬೇಕೆಂದು ಸರ್ ಎಸ್. ರಾಧಾಕೃಷ್ಣನ್ ಕಮಿಟಿಯವರು ಶಿಫಾರ್ಸು ಮಾಡಿದ್ದಾರೆ. ನಮ್ಮ ವ್ಯವಸಾಯದ ಕಾಲೇಜಿನ ಗತಿಯೇನಾಗಿದೆಯೆಂಬುದನ್ನು ನೋಡಬೇಕು. ಹೋದ ವರ್ಷ ನಮ್ಮ ವ್ಯವಸಾಯದ ಕಾಲೇಜನ್ನು ಮುಚ್ಚಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದರು. ಆದರೆ ಕಾರಣ ಸಾಕಾದಷ್ಟು ವಿದ್ಯಾರ್ಥಿಗಳು ಬರುತ್ತಿಲ್ಲವೆಂದು ಒಂದುಕಾರಣ. ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಬಾರದಿರುವುದಕ್ಕೆ ಕಾರಣ ವ್ಯವಸಾಯದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಪದವೀಧರರಿಗೆ ಇತರ ಪದವೀಧರರಂತೆ ಎಲ್ಲಾ ಇಲಾಖೆಯಲ್ಲಿ ಕೆಲಸ ಸಿಕ್ಕುವ ಅನುಕೂಲವಿಲ್ಲದಿರುವುದು. ಆದ್ದರಿಂದ ವ್ಯವಸಾಯದ ಇಲಾಖೆಯಲ್ಲಿ ಮಾತ್ರ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಉತ್ತೀರ್ಣರಾದವರು ಆ ಇಲಾಖೆಯಲ್ಲಿ ಮಾತ್ರ ಕೆಲಸ ಮಾಡಬೇಕೆಂದು ಹೇಳುವುದು ನ್ಯಾಯವಲ್ಲ. ರೆವೆನ್ಯೂ ಇಲಾಖೆಯಲ್ಲಿಯೂ ಹೆಚ್ಚಾಗಿ ವ್ಯವಸಾಯದ ಅನುಭವವಿರುವವರಿಗೆ ಹೆಚ್ಚು ಅವಕಾಶವಿರಬೇಕಾದದ್ದು ನ್ಯಾಯ. ಅವರನ್ನು ಎಲ್ಲಾ ಕಡೆಗೂ ತೆಗೆದುಕೊಂಡರೆ ದೇಶಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸರಿಯಾದ ಏರ್ಪಾಡು ಮಾಡಬೇಕು.

ಕೆಲವರು ಹೇಳಿದಹಾಗೆ ಅಗತ್ಯವಾಗಿ ಈಗ ಆಗಬೇಕಾದ್ದು ಸಾಯಿಲ್‌ಸರ್ವೆ. ಇದಾಗಿ ಯಾವ ಭೂಮಿ

(ಶ್ರೀ ವಿ. ವೆಂಕಟಪ್ಪ.)

ಯಲ್ಲಿ ಏನು ಬೆಳೆಯಿಡಬೇಕು; ಯಾವ ಭೂಮಿಗೆ ಯಾವ ಗೊಬ್ಬರ ಹಾಕಬೇಕು ಎಂಬುದು ಸರಿಯಾಗಿ ತಿಳಿಯುದಿದ್ದರೆ ಎಷ್ಟೇ ಮುತವರ್ಜಿಯಿಂದ ವ್ಯವಸಾಯ ಮಾಡಿದರೂ ಎಷ್ಟು ಫಲ ದೊರೆಯಬೇಕೋ ಅಷ್ಟು ದೊರೆಯುವುದಿಲ್ಲ. ಇದನ್ನು ಅಗತ್ಯವಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಈಗ ಹೊಸರೀತಿಯ ಬತ್ತ ಬೆಳೆಯುವುದರಿಂದ ಪ್ರಯೋಜನವಾಗುತ್ತದೆ. ಆದರೆ ಸಾಕಾದಷ್ಟು ಗೊಬ್ಬರ ಬೇಕೆಂದರೆ foreign ಮೆನ್ಯೂರ್ ಕೊಡುತ್ತಾರೆ, ಅದು ಸಿಕ್ಕಬಹುದು. ಕಾಂಪೋಸ್ಟ್ ಸಾಕಾದಷ್ಟು ಒದಗಿಸುವುದಕ್ಕೆ ಪ್ರಯತ್ನಪಟ್ಟಿಲ್ಲ, ಅದನ್ನು ಸಾಕಷ್ಟು ಒದಗಿಸದಿದ್ದರೆ ಎಷ್ಟು ಪ್ರಯೋಜನ ಪಡೆಯಬೇಕೋ ಅಷ್ಟು ಪ್ರಯೋಜನ ಪಡೆಯುವುದಕ್ಕಾಗುವುದಿಲ್ಲ.

ಶ್ರೀ ಬಿ. ಚಿಕ್ಕಣ್ಣ (ಪಾವಗಲ್).—ಸ್ವಾಮಿ, ಸರ್ಕಾರದವರು ವ್ಯವಸಾಯದ ಇಲಾಖೆಗೆ ಬೇಕಾದಷ್ಟು ಹಣ ಕೊಡುತ್ತಿದ್ದಾರೆ. ಆದರೆ ಅದು ಸಾರ್ಥಕವಾಗುತ್ತಿಲ್ಲ. ನಿಜವಾಗಿಯೂ ವ್ಯವಸಾಯದ ಇಲಾಖೆ ಅಧಿಕಾರಿಗಳು, ತಾಲ್ಲೂಕುಗಳಲ್ಲಿ ಮತ್ತು ಡಿಸ್ಟ್ರಿಕ್ಟುಗಳಲ್ಲಿ ಇರುವವರು ಒಳ್ಳೇ ಭಾಗ್ಯವಂತರು, ಅವರು ಏನೂ ಕೆಲಸವಾಡದೆ ಸುಖವಾಗಿರಬಹುದು, ಸುಲಭವಾಗಿ ಸಂಬಳ ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಅನ್ಯಾಯವಾಗಬಾರದು. ಈಗ ಈ ಇಲಾಖೆಯನ್ನು ಬಹಳ ಅನುಭವಿಗಳಾದ ಮಂತ್ರಿಗಳು ವಹಿಸಿಕೊಂಡಿದ್ದಾರೆ. ಮತ್ತು ಅವರು ಡಾಕ್ಟರ್ ಪ್ರಶಸ್ತಿ ಪಡೆದಿದ್ದಾರೆ. ಅವರು ಈಗಲಾದರೂ ವ್ಯವಸಾಯದ ಇಲಾಖೆಯ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈಗ ರೀಜನಲ್ ಫಾರಂಗಳನ್ನು ತೆರೆದಿದ್ದಾರೆ. ಅರಸೀಕೆರೆಯಲ್ಲಿ ಅಂಥಾದ್ದೊಂದಿದೆ. ಆದರೆ ಅದರ ಉತ್ಪತ್ತಿ ಮತ್ತು ಆದಾಯ ಕೇಳಿದಾಗ 8 ಸಾವಿರ ರೂಪಾಯಿಗಳು ನಷ್ಟವಾಗುತ್ತದೆಂದು ಹೇಳಿದ್ದಾರೆ. ಅಲ್ಲಿರುವ ಆಫೀಸರು, ಅದನ್ನು ನಡೆಸುವವರು ಎಂ. ಎಸ್‌ಸಿ. ಪಾಸು ಮಾಡಿದ್ದಾರೆ. ಆದರೆ ಅವರಿಗೆ ವ್ಯವಸಾಯದ ಅನುಭವವೇ ಇಲ್ಲ, ಅಂಥ ಆಫೀಸರನ್ನು ಅಲ್ಲಿ ಹಾಕಿದರೆ ಅವರೇನು ತಾನೆ ಮಾಡುತ್ತಾರೆ! ದೊಡ್ಡ ದೊಡ್ಡ ಅಂಥ ಅಧಿಕಾರಿಗಳು ಗರಿಗರಿಯಾಗಿ ಡ್ರೆಸ್ ಮಾಡಿಕೊಳ್ಳುವವರು ನಿಜವಾಗಿಯೂ ಧೂಳಿನಲ್ಲಿ ಕೆಲಸ ಮಾಡುತ್ತಾರೆಯೇ ? ಅಂಥ ಅಧಿಕಾರಿಗಳನ್ನು ನೇಮಿಸಿ ಹಣ ಪೋಲು ಮಾಡುವುದು ಸರಿಯಲ್ಲ. ಅದಕ್ಕೆ ಬದಲಾಗಿ ಅನುಭವವಿರುವವರನ್ನು ಅಲ್ಲಿಗೆ ಹಾಕಿದ್ದರೆ ಅಲ್ಲಿನ ಜಮೀನಿನ ರೈತರು ಇದುವರೆಗೆ 10-20 ಸಾವಿರ ರೂಪಾಯಿಗಳ ಉತ್ಪತ್ತಿ ತೋರಿಸುತ್ತಿದ್ದರು. ಅಲ್ಲಿರುವ ಅಧಿಕಾರಿಗಳು ಅವರ ಮೇಲಧಿಕಾರಿಗಳು ಅಲ್ಲಿಗೆ ಬಂದಾಗ ರೈತರು ಬೆಳೆದಿರುವ ದೊಡ್ಡ ದೊಡ್ಡ ತೆನೆಗಳನ್ನು ತೆಗೆದುಕೊಂಡು ಹೋಗಿ ಅದನ್ನು ತಾವೇ ಬೆಳೆದದ್ದು ಎಂದು ತೋರಿಸುತ್ತಾರೆ. ಇದು ನನ್ನ ಅನುಭವದ ಮಾತು. ಹೀಗೆ ಮಾಡುವುದು ಅನ್ಯಾಯ. ಆದ್ದರಿಂದ ಇದನ್ನು ಅನುಭವಿಗಳಾದ ಮಾನ್ಯ ಮಂತ್ರಿಗಳು ಗಮನಿಸಿ ಈ ವ್ಯವಸಾಯದ ಇಲಾಖೆಯನ್ನು ಚೆನ್ನಾಗಿ ತರಬೇತುಮಾಡಿ ಅಲ್ಪಸ್ವಲ್ಪವಾದರೂ ಹೆಚ್ಚಿನ ಅನುಕೂಲವಾಗುವ ಹಾಗೆ ಮಾಡುತ್ತಾರೆಂದು ಭಾವಿಸುತ್ತೇನೆ.

*ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಈ ವ್ಯವಸಾಯದ ಇಲಾಖೆಯಿಂದ ಸಂಸ್ಥಾನದಲ್ಲಿ ಜನತೆ ಎಷ್ಟರ ಮಟ್ಟಿನ ಪ್ರಯೋಜನವನ್ನು ನಿರೀಕ್ಷಿಸಿದ್ದಾರೋ ಅಷ್ಟು ಆಗುತ್ತಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ವರ್ಷಕ್ಕೆ ಸುಮಾರು 60 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿರುವ ಈ ಇಲಾಖೆ ಸಂಸ್ಥಾನದಲ್ಲಿ ವ್ಯವಸಾಯಾಭಿವೃದ್ಧಿಗಾಗಿ ಹೆಚ್ಚಿನ ಉಪಕಾರವನ್ನು ಮಾಡುವಕಾರ್ಯದಲ್ಲಿ ವಿಫಲಗೊಂಡಿದೆ.

ವ್ಯವಸಾಯಾಭಿವೃದ್ಧಿಗಾಗಿ ಸಂಸ್ಥಾನದ ನಾನಾ ಭಾಗಗಳಲ್ಲಿ ಸರ್ಕಾರದವರು ತೀವ್ರ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹಿಂದೆಯೂ ಸಹ ಸಭೆಯಲ್ಲಿ ಸರ್ಕಾರದ ಗಮನಕ್ಕೆ ಒತ್ತಾಯ ಪೂರ್ವಕವಾಗಿ ತಿಳಿಸಿದೆ. ಈ ಬಗ್ಗೆ ಸರ್ಕಾರದವರು ಸಂಶೋಧನಾಲಯಗಳನ್ನು (research stations) ಆಯಾಯಾ ಸ್ಥಳಗಳಲ್ಲಿ ಯಾವ ಬೆಳೆಗೆ ಎಲ್ಲಿ ಅನುಕೂಲ ಜಾಸ್ತಿಯಾಗಿರುತ್ತೊ ಅಲ್ಲಿ ಆ ಬೆಳೆಗೆ ಸಂಬಂಧಿಸಿದಹಾಗೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕು. ಉದಾಹರಣೆಯಾಗಿ, ನಮ್ಮ ಸಂಸ್ಥಾನದಲ್ಲಿ ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲದೆ ಅಲ್ಲಲ್ಲಿ ಜೋಳವನ್ನೂ ಬೆಳೆಯುತ್ತಾರೆ. ಅರಸೀಕೆರೆ ತಾಲ್ಲೂಕಿನಲ್ಲಿ M. A. (5) ಹತ್ತಿಯನ್ನು ಬೆಳೆಯುತ್ತಾರೆ. ಹೀಗೆ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯುತ್ತಾರೋ ಅದಕ್ಕೆ ಸಂಬಂಧಿಸಿದ ಹಾಗೆ ಸಂಶೋಧನಾಲಯಗಳನ್ನು ಆಯಾ ಪ್ರದೇಶದಲ್ಲಿ ಸ್ಥಾಪಿಸಬೇಕು. ಹೀಗೆ ಮಾಡುವುದರಿಂದ ಆಯಾಯಾ ಸ್ಥಳದ ಹವಾಮಾನಕ್ಕೆ ಅನುಗುಣವಾದ ಪೈರಿನ ಸಂಶೋಧನಾ ಕಾರ್ಯ ಯಶಸ್ವಿಯಾಗಿ ನಡೆಯಲು ಸಹಾಯಕವಾಗುತ್ತೆ. ಈ ವಿಚಾರವನ್ನು ಕಳೆದ ಅಸೆಂಬ್ಲಿಯಲ್ಲಿಯೂ ಸಹ ಸಂಬಂಧಪಟ್ಟ ಮಂತ್ರಿಗಳು ಒಪ್ಪಿಕೊಂಡಿದ್ದರು. ಆದರೆ ಈ ಬಗ್ಗೆ ಏನೂ ಏರ್ಪಾಡು ನಡೆಸಿದಂತೆ ಕಾಣಲಿಲ್ಲ.

ಹತ್ತಿಯ ವಿಚಾರದಲ್ಲಿ ಅಂತೂ ಬಹಳ ಅನ್ಯಾಯವಾಗಿದೆ. ಹಿಂದೆ ಅರಸೀಕೆರೆ ಹತ್ತಿಯ ವ್ಯಾಪಾರಕ್ಕೆ ಕೇಂದ್ರವಾಗಿತ್ತು. ಅಲ್ಲಿ ಮೊದಲು ಮೂರು ಲಕ್ಷ ಮಣದಷ್ಟು ಹತ್ತಿ ಬೆಳೆಯುತ್ತಿದ್ದ ಪ್ರದೇಶದಲ್ಲಿ ಈಗ ಈ ಬೆಳೆಯು ಕೇವಲ 80 ಸಾವಿರ ಮಣಕ್ಕೆ ಇಳಿದಿದೆಯೆಂದರೆ ಇದೆಷ್ಟು ವಿಷಾದಕರವಾದ ಸಂಗತಿಯೆಂಬುದು ಎಲ್ಲರಿಗೂ ತಿಳಿಯತಕ್ಕದ್ದೇ ಆಗಿದೆ. ಇದನ್ನು ಗಮನಿಸಿದುದೇ ಆದರೆ, ಈ ಸಭೆಯಲ್ಲಿ ಸರ್ಕಾರದವರು ಕೊಡುವ ವಾಗ್ದಾನವನ್ನು ಅಧಿಕಾರಿಗಳು ನಡೆಸುತ್ತಾರೋ ಇಲ್ಲವೋ ಎಂಬ ಅನುಮಾನವು ಸಹ ಉಂಟಾಗುತ್ತೆ. ಹೀಗಾಗದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಈ ಇಲಾಖೆಗೆ ಒದಗಿಸಿರುವ 60 ಲಕ್ಷ ರೂಪಾಯಿಗಳು ಸಾರ್ಥಕವಾದ ರೀತಿಯಲ್ಲಿ ಖರ್ಚಾಗುವಂತೆ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ, ಅದನ್ನು ಅಗತ್ಯವಾಗಿ ಮಾಡಬೇಕೆಂದು ಈ ಮೂಲಕ ಕೋರುತ್ತೇನೆ.

Dr. R. NAGAN GOWDA.—Mr. Speaker, Sir, let me in the first place thank the members for some nice things they have said about me. If they had merely said that I am a cultivator, that I am a raiyat, that would have been enough. More than that I never claim at all. I am thankful to the members for the great interest they have evinced in this industry but I must tell them that this is the one industry, I might say this right in the beginning, that has been delivering the

goods. It has been supplying the needs of this country for food and to a greater extent than other industries are supplying other needs of the people. And we are trying to make greater supply and in a more adequate form and so this is one of the important industries.

I will take the important points that have been raised by Hon'ble Members, one after another, and if I leave some of them it is merely because for want of time. The most important question raised was whether this department was justified in spending half a crore of rupees. In this State we have about 65 lakhs of acres of land under cultivation. One Member said, I think it is Sri Srinivasa Iyengar, that it was 82 lakhs of acres. But it does not matter. Even if we take 65 lakhs as the acreage under cultivation, we are spending just 62 lakhs or a little less than 62 lakhs. That is, less than a rupee per acre. This includes research, propaganda, development and all that. If you take population as the basis, there are a crore of people in the State and it comes to just half a rupee for each individual for production, development and supply of agricultural requirements. I do not think it is very much. Compared to other States, it is much lower. But I do not mean to say that this money should not be used properly. I agree with all the Hon'ble Members that have spoken that the sum of Rs. 50 lakhs or half a crore that has been allotted for this department should be used properly. We should make the best use of it, because it is capable of producing great deal more results. It is the result of the use of this amount that is of much greater value than a similar amount of money spent on any other department and hence we should not say that this amount need not be given.

Then I immediately proceed to the other important question of research work. I am glad that everybody has laid emphasis on this work, because without research it is like heart stopping from beating. I will give you one example. Now we have new varieties of sugarcane. We used to have *patta patti* and other varieties but the new varieties of sugarcane have enabled us to produce as much as 100 tons per acre. But that is not the average. The average is very close to 40 tons per acre in South India. That is all the result of research and therefore there is no question of research not being carried on. We carry it on more effectively, more usefully, and to try to solve our problems.

One Hon'ble Member was saying about Benkiroga. A large amount of work is just now being carried on in Madras to combat this disease, and to produce varieties of paddy that will withstand the blast disease. So research is very important. I hope you will not grudge this much amount of money for it.

One Hon'ble Member was saying about research work in respect of cotton. I agree with him that research on cotton has to be carried on further. The work that has been carried on here is of a very high order; so far as MA5 is concerned it is to be developed. But his point of view is that research is to be carried on further. The question is when we have carried research work, do you take the results to the place where the raiyat is. I am very glad that many members have paid much attention to that aspect. I agree with one and all that have spoken in this House, that we should not make the Agricultural Inspectors salesmen. Let me take this opportunity of telling this House that we are trying to reduce as much as possible this sales work from the Inspector. Indeed by first April I think we will have removed the sale of ammonium sulphate from the hands of the inspectors and given them over to the proper agencies, namely, the trade channels and co-operative societies. We have got multi-purpose co-operative societies in taluks and hoblis and I think it is their function to sell this manure and we will hand that work over to them. But I would not be able to say the same thing about seeds. I think it will be necessary for us to carry on that work through the Inspector, because it is important that the seeds should reach the cultivators and that in pure form.

(DR. R. NAGAN GOWDA.)

There is another question of the Inspectors getting into contact with the cultivators. It is very important that they should get into contact with the cultivators. I have been insisting on that and we will see that they do so.

An Hon'ble friend was saying that these people put on suit and boots and the cultivators are scared away by them. It is necessary that the Inspectors should also be practical agriculturists. That means they should know how the agricultural operations are carried on. I have been telling these Inspectors that whenever they get an opportunity, they should go to the fields and plough, sow, reap and all that. We have not been doing that. We have been sitting down like Inamdars.

Sri S. SRINIVASA IYENGAR.—That class has gone down.

Dr. R. NAGAN GOWDA.—We won't create another new one. I am insisting on the Agricultural Inspectors that they should all know all the agricultural operations, not merely know the operations but they have to be at it and be better cultivators. Otherwise how can they show to the raiyats what they should do ?

There is another point that was raised—I am racing against time—about the college. You have got a college here. It is in poor buildings. Sri Bheemappa Naik is not here now. It is true that we have got it in a poor building. But it requires at least 25 to 30 lakhs to put up new buildings. And so this year we will continue in the same buildings. We should be able to spend some money over the buildings and we will make arrangements to see that the laboratory is put in there. The laboratory, as it is, is located there in a way till we can afford to keep them in a good building.

I now come to the question of employment of agricultural graduates in all other departments. I am one with you in that they should be given the same chances that law graduates or science graduates or economic graduates get. The agricultural graduate learns science, economics, co-operation and everything else and so I think there is no reason why he should not be given the same chances for appointment in all departments.

Sri Lakkappa said that an area of 25,000 acres has been brought under cultivation under Japanese method of cultivation. We are very enthusiastic about it. This year we wanted to bring 25,000 acres under that system of cultivation but we have brought about 27,000 acres. The increase has been, as I said before here, very satisfactory. We expected 33 per cent increase but we have got 47 per cent increase. In some cases it is double and in some other cases it is treble. There is the prospect of this system of cultivation proving to be much better hereafter, He wanted 60,000 acres to be brought under cultivation. But we want to make it one lakh of acres.

11 A.M.

Then tnere is the other question about the pests and diseases that my friend raised. We are spending a lakh of rupees on this and I would not mind, even if we spend a little bit more. But the question is, it must be used properly. We are doing very good work on pests in the Department of Entomology here in this State. In Mysore research work in Entomology has been very good, Sir.

With these remarks, I hope the Hon'ble Members will see that the work that has been done by the Agricultural Department is of a high order and it is very necessary to carry on further work. I therefore request them to pass this Demand.

Mr. SPEAKER.—The question is :

"That a sum not exceeding Rs. 52,73,333 be granted to the Government to defray the charges which will come in course of payment during the year ending 31st day of March 1955, in respect of 'Agriculture (Except Botanical and other Public Gardens)."

The motion was adopeted.

DEMAND No. 22—BOTANICAL AND OTHER PUBLIC GARDENS.

40 (h) Botanical and other Public Gardens.

Mr. SPEAKER.—Motion moved :

> "That a sum not exceeding Rs. 9,07,124 be granted to the Government to defray the charges which will come in course of payment during the year ending 31st day of March 1955, in respect of 'Botanical and other Public Gardens'."

We have only 15 minutes for this Demand. The first and the last Hon'ble Members who have tabled cut motions, Sri S. R. Nagappa Setty and Sri S. Gopala Gowda will each speak for five minutes and then the Hon'ble Minister will take five minutes.

Sri J. MOHAMED IMAM (Jagalur).—Sri Nagappa Setty will not oppose the Demand.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಈ ಬೊಟ್ಯಾನಿಕಲ್ ಗಾರ್ಡನ್‌ಗಳ ಅಗತ್ಯತೆ ಬೆಂಗಳೂರು, ಮೈಸೂರು ನಗರಗಳಲ್ಲಿ ಮಾತ್ರವೇ ಅಲ್ಲದೆ ಇತರ ಜಿಲ್ಲೆಗಳಲ್ಲೂ ಇದೆ. ಆದ್ದರಿಂದ ಬೆಂಗಳೂರು, ಮೈಸೂರು ನಗರಗಳಲ್ಲಿರತಕ್ಕ ಗಾರ್ಡನ್‌ಗಳನ್ನು ಮುನಿಸಿಪಾಲಿಟಿಯವರಿಗೇ ವಹಿಸಿಕೊಟ್ಟು, ಉಳಿದಿರತಕ್ಕ 8 ಲಕ್ಷ ರೂಪಾಯಿಗಳನ್ನು ಇತರ ಜಿಲ್ಲೆಗಳಿಗೆ ಕೊಟ್ಟು ಇದೇ ರೀತಿಯ ಉದ್ಯಾನವನಗಳ ಸೌಕರ್ಯವನ್ನು ಅಲ್ಲಿನ ಜನಗಳಿಗೆ ಏರ್ಪಡಿಸಿ ಕೊಡಬೇಕಾದ್ದು ಅಗತ್ಯವಾಗಿದೆ. ಕೆಲವು ಭಾಗಗಳಲ್ಲಿ ಮಾವಿನ ಗಿಡಗಳನ್ನು ಬೆಳೆಯುತ್ತಾರೆ. ಮೈಸೂರು ಸಂಸ್ಥಾನದಲ್ಲಿ 1 ಲಕ್ಷ ಮಾವಿನ ಗಿಡಗಳು ಮಾರಾಟವಾಗುತ್ತಿವೆ. ಸುಮಾರು 25 ಸಾವಿರ ಗಿಡಗಳನ್ನು ಹೊರಗಡೆ ಕಳುಹಿಸುತ್ತಾರೆ. ಸುಮಾರು 75 ಸಾವಿರ ಗಿಡಗಳನ್ನು ಮೈಸೂರು ಸಂಸ್ಥಾನದಲ್ಲೇ ನೆಡುತ್ತಾ ಇದ್ದಾರೆ. ಹಳ್ಳಿಯವರು ಗಿಡಗಳ ಡೇಕ ರೇಖೆ ತಿಳಿಯದೆ, ಎಂಥಾ ಭೂಮಿಯಲ್ಲಿ ನೆಡಬೇಕು ಎಂಬ ಕ್ರಮವನ್ನು ತಿಳಿಯದೆ, ಗಿಡಗಳು ಮಾಗಿಹೋಗುತ್ತಿವೆ. ಒಂದು ವರ್ಷದಲ್ಲಿ ಸುಮಾರು ಐದು, ಅಥವ ಹತ್ತುಸಾವಿರ ಗಿಡಗಳು ಬದುಕುತ್ತವೆ ಇಲ್ಲವೆ ಎಂಬುದು ಅನುಮಾನವಾಗಿದೆ. ಈ ರೀತಿ ಆಗದಂತೆ ಅವರಿಗೆ ತಕ್ಕ ತಿಳಿವಳಿಕೆಯನ್ನು ಕೊಡಬೇಕು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮವಾದ ಕಿತ್ತಲೆ ಹಣ್ಣು ಬೆಳೆಯುತ್ತಾರೆ. ಅಲ್ಲಿ ಕಿತ್ತಲೆ ಹಣ್ಣಿನ ವ್ಯವಸಾಯಕ್ಕೆ ಹೆಚ್ಚಿನ ಉತ್ತೇಜನ ಕೊಡಲು ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಕೊಳ್ಳುತ್ತಾ ಇಲ್ಲ. ಉತ್ತರ ಹಿಂದೂಸ್ಥಾನದ ನಾಗಪುರದ ಸುತ್ತಮುತ್ತಲೂ ಯಾವ ರೀತಿ ಅನುಕೂಲ ಇದೆಯೋ ಅದೇ ರೀತಿ ಅನುಕೂಲ ಇಲ್ಲಿ ಇದ್ದರೂ ಕೂಡ ಅದಕ್ಕೆ ಹೆಚ್ಚಿನ ನಿಗಾಕೊಟ್ಟಿಲ್ಲ. ಕಾಫಿ ತೋಟಗಳಲ್ಲಿ ಮಧ್ಯೆ ಮಧ್ಯೆ ಅಲ್ಪಸ್ವಲ್ಪ ಗಿಡಗಳನ್ನು ಹಾಕಿಕೊಂಡು ಬೆಳೆಸುತ್ತಾ ಇದ್ದಾರೆ. ವ್ಯಾಪಾರ ದೃಷ್ಟಿಯಿಂದ ಮಾಡುತ್ತಾ ಇಲ್ಲ. ಹಣ್ಣಿನ ವ್ಯವಸಾಯ ಮಲೆನಾಡಿನಲ್ಲಿ ಅನುಕೂಲಗಳಿವೆ. ಇದಕ್ಕೆ ಹೆಚ್ಚಿನ ನಿಗಾ ಕೊಡಬೇಕು. ಮಲೆನಾಡಿನಲ್ಲಿ ಪ್ರಕೃತಿ ಸೌಂದರ್ಯ ಇದೆ. ಆ ಪ್ರಕೃತಿ ಸೌಂದರ್ಯವನ್ನು ಉಪಯೋಗಕ್ಕೆ ಬರುವಂತೆ ಮಾಡಿಕೊಂಡು ಮಲೆನಾಡಿನಲ್ಲಿ ಮತ್ತು ಪ್ರತಿ ಜಿಲೆಯಲ್ಲಿ ಉದ್ಯಾನವನಗಳನ್ನು ಮಾಡುವುದು ಉತ್ತಮ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸ್ವಾಮಿ, ಬೊಟ್ಯಾನಿಕಲ್ ಮತ್ತು ಇತರ ಉದ್ಯಾನವನಗಳಿಗೆ ಸಂಬಂಧಪಟ್ಟ 9,07,124 ರೂಪಾಯಿಗಳ ಡಿಮ್ಯಾಂಡ್ ಮನವಿಯನ್ನು ಸರ್ಕಾರದವರು ಕೇಳಿರುವುದನ್ನು ವಿರೋಧಿಸುತ್ತಾ ಈ ಇಲಾಖೆ ವಿಷಯವಾಗಿ ಕೆಲವು ವಿಷಯಗಳನ್ನು ತಿಳಿಸುತ್ತೇನೆ. ಈ ಆಯವ್ಯಯ ಪಟ್ಟಿಯಲ್ಲಿ ಸುಮಾರು 8,95,400 ರೂಪಾಯಿಗಳ ಅಂದಾಜನ್ನು ತೋರಿಸಿದ್ದೀರಿ. ಇಷ್ಟು ರೂಪಾಯಿಗಳೂ ಕೂಡ ಮೈಸೂರು ಸಂಸ್ಥಾನದಲ್ಲಿರುವ ಪ್ರಜೆಗಳ ಉಪಯೋಗಕ್ಕೆ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ. ಇದಕ್ಕೆ ಖರ್ಚುಮಾಡುತ್ತಾ ಇರುವುದು ಅವಶ್ಯಕತೆಗಿಂತ ಬಹಳ ಜಾಸ್ತಿಯಾಗಿ ಮೀರಿದೆ. ಇದರಲ್ಲಿ ಮಿತವ್ಯಯ ಮಾಡುವುದಾದರೆ ಸುಮಾರು 4,83,400 ರೂಪಾಯಿಗಳನ್ನು ಖರ್ಚುಮಾಡಿ, 4,12,000 ರೂಪಾಯಿಗಳನ್ನು ಮಿತವ್ಯಯಮಾಡುವುದು ಉತ್ತಮವಾಗಿದೆ. ಈ ರೀತಿ ಮಾಡಲು ಎಷ್ಟುಮಟ್ಟಿಗೆ ಸಾಧ್ಯ ಇದೆ, ಯಾವ ರೀತಿ ಮಾಡಬಹುದು ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಹೇಳಬೇಕಾದ್ದು ನಮ್ಮ ಕರ್ತವ್ಯ. ಪ್ರತಿಯೊಂದು ಇಲಾಖೆಯಲ್ಲೂ ಮಿತವ್ಯಯವನ್ನು ಆಚರಣೆಗೆ ತರಬೇಕೆಂದು ಹೇಳುತ್ತೀರಿ. ಅದೇ ರೀತಿ ಎಲ್ಲಾ ಇಲಾಖೆಯಲ್ಲೂ ಮಿತವ್ಯಯಮಾಡುತ್ತಾ ಇದ್ದೀರಿ. ಆದರೆ ಈ ಇಲಾಖೆಯಲ್ಲಿ ಮಾತ್ರ ಖರ್ಚಿನ ಬಾಬು ಜಾಸ್ತಿಯಾಗುತ್ತಾ ಇದೆ, ಮಿತವ್ಯಯ ಆಗುತ್ತಾ ಇಲ್ಲ. ಹಿಂದಿನ ಮತ್ತು ಮುಂದಿನ ಸಾಲಿನ ಬಡ್ಜೆಟ್‌ನಲ್ಲಿ ಇವಕ್ಕೆ ಎಷ್ಟು ಹಣ ಒದಗಿಸಲಾಗಿದೆ, ಎಷ್ಟು ಮಟ್ಟಿಗೆ ಮಿತವ್ಯಯ ಮಾಡಬಹುದು ಎಂಬುದನ್ನು ಹೇಳುತ್ತೇನೆ. ಈಗ ಬಂದು ಡೆಪ್ಯುಟಿ ಸೂಪರಿಂಟೆಂಡೆಂಟರ ಕೆಲಸ ಇದೆ. 1947 ರಿಂದಲೂ ಅದು ಖಾಲಿಯಾಗಿಯೇ ಇದೆ. ಆ ಪೋಸ್ಟನ್ನು ಸರ್ಕಾರದವರು ಭರ್ತಿ ಮಾಡಬಾರದು ಎಂದು ಯೋಚನೆಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ನಿರ್ದಿಷ್ಟವಾಗಿ ಇದು ಅನಾವಶ್ಯಕ ಎಂಬ ತೀರ್ಮಾನಕ್ಕೆ ಬರಲು ಅನೇಕ ಕಾರಣಗಳು ಇವೆ. ಅರಮನೆ ಉದ್ಯಾನವನಗಳನ್ನು ಪುನಃ ಅರಮನೆಗೇ ಕೊಡಲ್ಪಟ್ಟಿರುವುದರಿಂದಲೂ ಮತ್ತು ಕೆಮ್ಮಣ್ಣಗುಂಡಿ ಹಿಲ್ ಸ್ಟೇಷನ್ ಭದ್ರಾವತಿ ಕಬ್ಬಿಣ ಕೈಗಾರಿಕಾ ಕಾರ್ಖಾನೆಗೆ ವಹಿಸಿ ಕೊಡಬೇಕೆಂಬ ಸೂಚನೆ ಸರ್ಕಾರದವರ ಮುಂದೆ ಇರುವುದರಿಂದಲೂ, ಜಿಲ್ಲೆಗಳಲ್ಲಿರತಕ್ಕ ಉದ್ಯಾನವನಗಳಿಂದ ಅಷ್ಟೇನೂ ಆದಾಯ ಬರುತ್ತಿಲ್ಲದೇ ಇರುವುದರಿಂದಲೂ ಮತ್ತು ಅಷ್ಟು ಚೆನ್ನಾಗಿ ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯವಾಗದೇ ಇರುವುದರಿಂದಲೂ, ಜಿಲ್ಲೆಯಲ್ಲಿರತಕ್ಕ ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಪ್ರಯೋಗಕ್ಕಾಗಿ ಉದ್ಯಾನವನಗಳನ್ನು ಕೊಡಬೇಕೆಂಬ ಸೂಚನೆ ಇರುವುದರಿಂದಲೂ ಕೂಡ ಈ ಡೆಪ್ಯುಟಿ ಸೂಪರಿಂಟೆಂಡೆಂಟರ ಹುದ್ದೆ ಅನಾವಶ್ಯಕವಾಗಿದೆ. ಇದನ್ನು ರದ್ದುಮಾಡುವುದರಿಂದ ಸಾಲಿಯಾನಾ ಸುಮಾರು 4,000 ರೂಪಾಯಿ ಉಳಿತಾಯವಾಗುತ್ತದೆ. ಮತ್ತು ಜಿಲ್ಲೆಗೆ ಒಬ್ಬರು ಹಾರ್ಟಿಕಲ್ಚರಲ್ ಇನ್‌ಸ್ಪೆಕ್ಟರು ಇದ್ದಾರೆ. ಅವರ ಶಿಬ್ಬಂದಿ ಇದೆ. ಈ ಶಿಬ್ಬಂದಿಗೆ ಸಾಲಿಯಾನಾ 80,000 ರೂಪಾಯಿ ಖರ್ಚಾಗುತ್ತಾ ಇದೆ. ಜಿಲ್ಲೆಯಲ್ಲಿರತಕ್ಕ

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಉದ್ಯಾನವನಗಳ ಇಲಾಖೆ ಸ್ವಲ್ಪವಾದರೂ ಕೆಲಸ ಮಾಡುತ್ತಿಲ್ಲ. ಅದು ಸರ್ಕಾರದವರ ಗಮನಕ್ಕೆ ಬಂದಿದೆ ಎಂದು ನಂಬಿದ್ದೇನೆ. ಅಲ್ಲಿರತಕ್ಕ ಪ್ಲಾಂಟ್ ಪ್ರಾಪಗೇಟರ್ಸ್ ಮತ್ತು ಫೀಲ್ಡ್‌ಮನ್ ಎಲ್ಲಿ ಕೆಲಸ ಮಾಡುತ್ತಾರೋ ನೋಡಿಯೋ ಇಲ್ಲ. ಈ ಇಲಾಖೆಯಲ್ಲಿ ಸಂಬಳ ತೆಗೆದುಕೊಂಡು ತಮ್ಮ ಸ್ವಂತ ಕೆಲಸ ಮಾಡಿಕೊಳ್ಳುವ ಸನ್ನಿವೇಶ ಅನೇಕ ಕಡೆ ಇದೆ. ಬಹಳ ಹೀನಸ್ಥಿತಿಯಲ್ಲಿರತಕ್ಕ ಉದ್ಯಾನವನಗಳು ಮತ್ತು ನರ್ಸರಿಗಳು ಬೇಕಾದಷ್ಟು ಇವೆ. ಒಂದು ಉದಾಹರಣೆ ಕೊಡುವುದಾದರೆ ಮೈಸೂರು-ಬೆಂಗಳೂರು ರಸ್ತೆ ಮಧ್ಯದಲ್ಲಿರತಕ್ಕ ಮದ್ದೂರಿನ ಉದ್ಯಾನವನ ಎಷ್ಟರ ಮಟ್ಟಿಗೆ ಇದೆ. ಅದನ್ನು ಈ ಸಭೆಯ ಮಾನ್ಯ ಸದಸ್ಯರು ಅಲ್ಲಿಗೆ ಹೋದಾಗ ನೋಡಿರಬಹುದು. ಹೀಗೆ ಸುಮ್ಮನೆ ಹಣವ್ಯಯಮಾಡಿ ದುರುಪಯೋಗವಾಗುತ್ತಿದೆ.

ಹಾರ್ಟಿಕಲ್ಚರಲ್ ಸೊಸೈಟಿಗಳಿಗೆ ಸಬ್‌ವೆನ್ಷನ್ ಎಂದು ಹೇಳಿ ಸುಮಾರು 2 ಸಾವಿರ ರೂಪಾಯಿ ಕೊಡುತ್ತಾ ಇದ್ದೀರಿ. ಈ ಸೊಸೈಟಿಯಿಂದ ಪುಣ್ಯವಂತರು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಪ್ರಯೋಜನವಾಗುತ್ತಾ ಇದೆಯೋ ಹೊರತು ಇತರರಿಗೆ ಯಾರಿಗೂ ಒಂದು ಕಾಸಿನ ಪ್ರಯೋಜನವೂ ನಿಜವಾಗಿ ಆಗುತ್ತಿಲ್ಲ ಎಂಬುದನ್ನು ಸರ್ಕಾರದವರು ಮನಗಂಡಿದ್ದಾರೆ ಎಂದು ಭಾವಿಸಿದ್ದೇನೆ.

ಉದ್ಯಾನವನದ ಇಲಾಖೆಗೆ ಒದಗಿಸಿರುವುದರಲ್ಲಿ ಹೆಚ್ಚಿನ ಭಾಗದ ಹಣ ಪಾರ್ಕ್ ಮೇನ್‌ಟೇನ್‌ಮಾಡುವುದಕ್ಕೆ ಖರ್ಚಾಗುತ್ತಾ ಇದೆ. ಸುಮಾರು 1 ಲಕ್ಷ 9 ಸಾವಿರ ರೂಪಾಯಿ ಪಾರ್ಕ್‌ಗಳನ್ನು ಕಾಪಾಡುವುದಕ್ಕೆ ಖರ್ಚುಮಾಡುತ್ತಾ ಇದ್ದೀರಿ. ಇಂಡಿಯಾ ದೇಶದಲ್ಲಿ ಬೇರೆ ಎಲ್ಲೂ ಇಷ್ಟೊಂದು ಹಣ ಖರ್ಚು ಮಾಡುವುದು ಕಂಡುಬರುತ್ತಾ ಇಲ್ಲ. ಇನ್ನು ಸಾಕಾದಷ್ಟು ಕಾಲ ಇಲ್ಲದೇ ಇರುವುದರಿಂದ ಈ ಮಿತವ್ಯಯವನ್ನು ಎಷ್ಟು ಮಟ್ಟಿಗೆ ಜಾರಿಗೆ ತರಬಹುದು ಎಂಬ ಒಂದು ಅಂದಾಜು ಇರುವುದರಿಂದ ಇದನ್ನು ಮಾನ್ಯ ಮಂತ್ರಿಗಳ ವಶಕ್ಕೆ ಕೊಟ್ಟು ಈ ಮಿತವ್ಯಯವನ್ನು ಆದಷ್ಟು ಜಾಗ್ರತೆ ಕಾರ್ಯಗತಮಾಡಬೇಕೆಂದು ಅವರನ್ನು ಪ್ರಾರ್ಥನೆಮಾಡಿಕೊಂಡು ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸಾಮಾನ್ಯವಾಗಿ ಮೈಸೂರು, ಬೆಂಗಳೂರು ಇಂಥಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇಲ್ಲಿರತಕ್ಕ ರಿಟೈರ್ ಆದ ಅಧಿಕಾರಿಗಳು ಸುಖಸಂಪತ್ತಿನಿಂದ ಆರೋಗ್ಯವಾಗಿ, ದೃಢಕಾಯರಾಗಿ ಇರುವುದಕ್ಕೋಸ್ಕರ ಈ ಉದ್ಯಾನವನಗಳನ್ನು ಏರ್ಪಡಿಸಿ ಸೌಕರ್ಯ ಮಾಡಿಕೊಟ್ಟಿದ್ದೀರಿ. ಈ ಅನುಕೂಲ ಸಂಸ್ಥಾನಾದ್ಯಂತ ಪ್ರತಿಯೊಬ್ಬರಿಗೂ ಇರಬೇಕು. ಹೆಚ್ಚು ಹಣವನ್ನು ಪಟ್ಟಣಗಳಿಗೇ ವ್ಯಯಮಾಡಿ ಇಲ್ಲಿರತಕ್ಕ ಜನಗಳ ಆರೋಗ್ಯ ಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಗ್ರಾಮಾಂತರಗಳಲ್ಲಿ ದುಡಿಯತಕ್ಕ ಜನರಿಗೂ ಈ ಒಂದು ಸೌಕರ್ಯವೇರ್ಪಡಿಸಿಕೊಡಲು ಸಾಕಾದಷ್ಟು ಹಣ ಖರ್ಚುಮಾಡಬೇಕಾದ್ದು ಅಗತ್ಯ...

ಅಧ್ಯಕ್ಷರು.—ತಮ್ಮ ಅಭಿಪ್ರಾಯ ಗೊತ್ತಾಯಿತು.

Dr. R. NAGAN GOWDA (Minister for Agriculture).—Sir, as a matter of fact Horticulture has a very important place in the life of a nation. It has got not merely the aspect of gardens and parks, but also orchards. Every country produces a large amount of fruits for consumption as food. That is an aspect of horticulture which should not be over-looked. It is a very important aspect. As suggested by Sri Nagappa Setty, we will indeed take greater interest in making it possible to grow oranges on a commercial scale.

The question of fruit diseases in oranges has been brought to the notice of the Government. I may tell him that not only this Government, but also the Central Government have taken and are taking steps to find out how this disease in oranges has been caused in some parts of this State.

So far as the other question is concerned, we are trying to develop nurseries all through the State. If it has not been properly done as pointed out by Sri B. P. Nagaraja Murthy, we will attend to this work and see that this work is done as well as it is expected. The idea is that we should enable the cultivators and others to take to the production of fruits to a greater extent. We are also carrying on a school here in Bangalore for teaching how to grow fruit gardens. It has made a good impression and we will do it in other parts. The work that has been done by the District Inspectors and field men is important. If some of them are slack, that should not mean that they should be removed. We will only see that their work is carried on properly.

About the economies that ought to be carried out in this Department and the reduction of allotment from 9 lakhs to 4½ lakhs suggested by Sri B. P. Nagaraja Murthy, I feel it is rather very drastic.

Sri S. SRINIVASA IYENGAR.—Merge it with the Agricultural Department.

Dr. R. NAGAN GOWDA.—All the points that have been suggested, I will certainly look into.

Sir, I will not go into details because of want of time. But I only say that we are going to use this Department for popularising growing fruits in the State which is very important, to the economy and also for the health of the people.

With these words, I request Hon'ble Members to kindly pass this Demand.

Mr. SPEAKER.—The question is:

"That a sum not exceeding Rs. 9,07,124 be granted to the Government to defray the charges which will come in course of payment during the year ending 31st day of March 1955, in respect of 'Botanical and other Public Gardens'."

The motion was adopted.

DEMAND No. 23—RURAL DEVELOPMENT

40 (A). Rural Development.

Mr. SPEAKER.—Motion moved:

"That a sum not exceeding Rs. 49,15,000 be granted to the Government to defray the charges which will come in course of payment during the year ending 31st day of March 1955, in respect of 'Rural Development'."

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಈ ರೂರಲ್ ಡೆವಲಪ್‌ಮೆಂಟ್ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ನಿಂತಿದ್ದೇನೆ. ಇದನ್ನು 1937ನೆಯ ಇಸವಿಯಿಂದಲೂ ಕೂಡ ಸರ್ಕಾರ ನಡೆಸುತ್ತಿದ್ದರೂ ಎಷ್ಟರ ಮಟ್ಟಿಗೆ ಅದರ ವಿಚಾರದಲ್ಲಿ ಕೆಲಸ ನಡೆಯಬೇಕೆಂದು ಉದ್ದೇಶಿಸಿತ್ತೋ ಅಷ್ಟರಮಟ್ಟಿಗೆ ಕೆಲಸಕಾರ್ಯ ನಡೆಯುತ್ತಿಲ್ಲ. ಉದಾಹರಣೆಗೆ ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ಈ ಸ್ಕೀಂನಲ್ಲಿ ವಿಲೇಜ್ ಕಮ್ಯೂನಿಕೇಷನ್ಸ್, ರೂರಲ್ ವಾಟರ್ ಸಪ್ಲೈ, ಡ್ರೈನೇಜ್ ಮುಂತಾದ ಕೆಲಸ ಕಾರ್ಯಗಳು ಅಡಕವಾಗಿವೆಯಾದರೂ ಅವು ಫಲಕಾರಿಯಾಗುವಂತೆ ನಡೆಯುತ್ತಿಲ್ಲ. ಕೆಲವು ಕಡೆ ತಾಲ್ಲೂಕುಗಳಲ್ಲಿ ಎಷ್ಟು ಬಾವಿಯಾಗಬೇಕು, ಡ್ರೈನೇಜ್ ಕೆಲಸವೆಷ್ಟಾಗಬೇಕು, ಎಷ್ಟು ಕಮ್ಯೂನಿಕೇಷನ್ ರಸ್ತೆಯಾಗಬೇಕು ಎಂದು ಯೋಜನೆಯನ್ನು ಕೂಡ ಸರ್ಕಾರ ಹಾಕಿಲ್ಲ. ಕೆಲವು ಕಡೆ ಪ್ರಪೋಸಲ್ ಏನಿತ್ತೋ ಅದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಅಡಕಮಾಡಿದ್ದಾರೆ. ನಮ್ಮ ಕಡೆ ನಾನು ಮತ್ತು ಶ್ರೀಮಾನ್ ಮಾದಪ್ಪನವರು 32 ಕಮ್ಯೂನಿಕೇಷನ್ ರಸ್ತೆಗಳಾಗಬೇಕೆಂದು ಹೇಳಿದ ಮೇಲೆ ಎಷ್ಟಿಮೇಟ್ ತಯಾರಿಸಿದ್ದರೂ ಕೂಡ ಕಳೆದ ಎರಡು ವರ್ಷಗಳಿಂದ ಒಂದೂ ಆಗಿಲ್ಲ. ಕುಡಿಯುವ ನೀರಿನ ವಿಷಯದಲ್ಲಿ ಸರ್ಕಾರದವರು ನಿರ್ಲಕ್ಷ್ಯ ಮಾಡಿದ್ದಾರೆ. ಇದೇ ಅಧಿವೇಶನದಲ್ಲಿ ನಾಲ್ಕು ಸಾವಿರ ಬಾವಿಗಳನ್ನು ತೆಗೆಸಬೇಕಾಗಿತ್ತು ಅದರಲ್ಲಿ 568 ತೆಗೆಯಲ್ಪಟ್ಟಿವೆ, ಈ ವರ್ಷ ಇನ್‌ಕಂಪ್ಲೀಟ್ ಆಗಿರುವ ಬಾವಿಗಳಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಕೆಲವು ಕಡೆ ಇನ್ನೂ ಬಾವಿಗಳನ್ನು ತೆಗೆಸಿಲ್ಲ, ಕಾರಣ ಕೇಳಿದರೆ go slow ಪಾಲಿಸಿ ಅನುಸರಿಸಬೇಕೆಂದು ಸರ್ಕ್ಯುಲರ್ ಇಷ್ಯೂ ಮಾಡಿದ್ದಾರೆಂದು ಹೇಳುತ್ತಾರೆ. ಕುಡಿಯುವ ನೀರಿಗೆ ಬೇಕಾದ ಬಾವಿ ಮುಂತಾದ ಸೌಕರ್ಯವನ್ನೊದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಇದು ಅತ್ಯಾವಶ್ಯಕ. ಎಲ್ಲೆಲ್ಲಿ ಈ ಕುಡಿಯುವ ನೀರಿನ ಸೌಕರ್ಯವನ್ನು ಮಾಡಿಕೊಟ್ಟಿಲ್ಲವೋ ಅಲ್ಲೆಲ್ಲಾ ಪೂರೈಸಿಲ್ಲದ ಕೆಲಸಗಳನ್ನು ಜಾಗ್ರತೆ ಪೂರೈಸಲು ಮತ್ತು ಹೊಸದಾಗಿ ಬಾವಿ ತೆಗೆಸಬೇಕಾದ ಕಡೆ ತೆಗೆಸಲು ಹೆಚ್ಚಾಗಿ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿ ನೀರಿನ ಅನುಕೂಲವನ್ನು ಕಲ್ಪಿಸಿಕೊಡಬೇಕು.

ಇನ್ನು ಹಿಂದುಳಿದ ಪಂಗಡದವರ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಅವರ ಪುರೋಭಿವೃದ್ಧಿಗಾಗಿ ಸರ್ಕಾರ ಅನುಸರಿಸುತ್ತಿರುವ ನೀತಿ ಬಹಳ ಶೋಚನೀಯವಾಗಿದೆ. 19 ಲಕ್ಷ ರೂಪಾಯಿಗಳನ್ನು ಕೇವಲ ಮನೆಕಟ್ಟುವುದಕ್ಕಾಗಿ ಉಪಯೋಗಿಸುತ್ತಿಲ್ಲ. ಈ ವರ್ಷ ಏನು ಮಾಡಿದ್ದಾರೆಂದರೆ ನಿಮ್ಮ ವರ್ಗದ ಪುರೋಭಿವೃದ್ಧಿಗೆಂದು ಒದಗಿಸಿರುವುದರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಾಗಿ ಮೀಸಲಾಗಿಟ್ಟಿದ್ದಾರೆ. ಇದು ಇದುವರೆಗೆ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಿಂದ ಕೊಡಲ್ಪಡುತ್ತಿತ್ತು. ಇದರಿಂದ ನಿಮ್ಮ ವರ್ಗದ ಪುರೋಭಿವೃದ್ಧಿಗಾಗಿ ಒದಗಿಸಿರುವ ಹಣದಲ್ಲಿ ಎರಡು ಲಕ್ಷ ಖೋತಾ ಆಗಿದೆ. ಇಂಡಿಯಾ ಸರ್ಕಾರದವರು ಅಸ್ಪೃಶ್ಯತಾ ನಿವಾರಣೆಗೆ ಮತ್ತು ಹಿಲ್ ಟ್ರೈಬ್ಸ್ ಅಭಿವೃದ್ಧಿಗೆ ಕೊಡುವ ಹಣವನ್ನು ಸೇರಿಸಿ ಎಂಟು ಲಕ್ಷ ರೂಪಾಯಿಗಳನ್ನು ಜಾಸ್ತಿಯಾಗಿ ಕೊಟ್ಟಿದೆಯೆಂದು ಸರ್ಕಾರದವರು ಕಣ್ಣೊರೆಸುವ ಹಾಗೆ ಬಡ್ಜೆಟ್ ಮಾಡಿರುವುದು ಶೋಚನೀಯವಾದ ವಿಷಯ. ಆದ್ದರಿಂದ ಹಿಂದುಳಿದ ಪಂಗಡಗಳದವರ ಅಭಿವೃದ್ಧಿಗಾಗಿ ಎಷ್ಟು ಹಣ ಹಿಂದಿನ ಸರ್ಕಾರದವರು ಕೊಡುತ್ತಿದ್ದರೋ ಅಷ್ಟು ಸಹ ಖರ್ಚಾಗುತ್ತಿಲ್ಲ; ಮತ್ತು ಸರಿಯಾದ ಏರ್ಪಾಡೂ ಆಗಿಲ್ಲ. ಅಲ್ಲಿ ಇಲ್ಲಿ ಒಂದೆರಡು ಮನೆಗಳಿಗೆ ಹೆಂಚು, ಹಣ ವಗೈರೆ ಕೊಡುವುದಕ್ಕೆ ಬದಲಾಗಿ ಎಲ್ಲಿ ಜಮೀನು ಯಥೇಷ್ಟವಾಗಿದೆಯೋ ಅಲ್ಲಿ ನೂರಾರು ಮನೆಗಳನ್ನು ಕಟ್ಟಿಸಿ ಒಂದು ವರ್ಷಕ್ಕಾಗುವ ಆಹಾರ ಪದಾರ್ಥಗಳನ್ನೊದಗಿಸಿ, ಜಮೀನು ಕೊಟ್ಟು, ಎತ್ತು ಮತ್ತು ವ್ಯವಸಾಯದ ಸಲಕರಣೆ ಕೊಟ್ಟು ಸಹಾಯ ಮಾಡಿದರೆ ಆಗ ಸ್ವಲ್ಪ ನಿಜವಾಗಿಯೂ ಸಹಾಯ ಮಾಡಿದಂತಾಗುತ್ತದೆ. ಅದೂ ಅಲ್ಲದೆ ಡಿಪ್ರೆಸ್ಡ್ ಕ್ಲಾಸ್ ಪಾಲಿಸಿ ಸಮಿತಿಯು ಶಿಫಾರ್ಸು ಮಾಡಿರುವಹಾಗೆ 19 ಲಕ್ಷ ರೂಪಾಯಿಗಳಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಬೇರೆ ರೀತಿಯಲ್ಲಿ ಅಂದರೆ ಹಾಸ್ಟಲುಗಳನ್ನು ಕಟ್ಟಿಸುವುದಕ್ಕಾಗಿ ಉಪಯೋಗಿಸಿ ಎಂದು ಹೇಳಿದ್ದಾರೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ಹೆಚ್ಚಾಗಿ ಫಂಡಿನಿಂದ ಹಣ ಕೊಡಬೇಕು. ಆದರೆ ಜನರಲ್ ಎಜುಕೇಷನ್ ಫಂಡಿನಿಂದ ಒಂದು ಕಾಸು ಕೂಡ ಕೊಡದಿರುವುದು ಬಹಳ ವಿಷಾದಕರ. ನಾಲ್ಕು ಲಕ್ಷ ಅಮೀಲಿಯೊರೇಷನ್ ಫಂಡಿನಿಂದ ಕೊಟ್ಟರೆ ಜನರಲ್ ಎಜುಕೇಷನ್ ಬಾಬಿನಿಂದ ನಾಲ್ಕು ಲಕ್ಷ ಕೊಡಬೇಕು.

ಹೆಚ್ಚಾಗಿ ಅಸ್ಪೃಶ್ಯತೆ ನಿವಾರಣೆಯಾಗಬೇಕಾದರೆ ಪ್ರಚಾರ ಒಂದೇ ಸಾಲದು. ಕಳೆದ ಒಂದು ತಿಂಗಳಿಂದ ಸಮ್ಮೇಳನ ಮಾಡಿದರು. ಅದರಿಂದ ನಿವಾರಣೆ ಆಗುವುದಿಲ್ಲ. ಇದನ್ನು ಪುನರ್ವಿಮರ್ಶೆಮಾಡಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ವಿದ್ಯಾರ್ಥಿವೇತನ ಮುಂತಾದುವನ್ನು ಕೊಟ್ಟು ಅದನ್ನು ಮುಂದುವರಿಸಿದರೆ ಆಗ ವಿದ್ಯಾಭ್ಯಾಸ ಹೆಚ್ಚಿ ಜ್ಞಾನಾರ್ಜನೆ ಸಾಕಷ್ಟಾಗಿ ಅಸ್ಪೃಶ್ಯತೆಯು ನಿವಾರಣೆಯಾಗುತ್ತದೆ. ಪ್ರಚಾರ ಮಾಡುತ್ತೇವೆಂದು ಬೋಂಡ ತಿಂದು ಖರ್ಚುಹಾಕಬಾ

(ಶ್ರೀ ಬಿ. ರಾಚಯ್ಯ.)

ರದು. ಪ್ರಚಾರಕ್ಕೆ ಹೆಚ್ಚಾಗಿ ಹಣ ಖರ್ಚುಮಾಡಬಾರದು ಎಂದು ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಗ್ರಾಮಾಭಿವೃದ್ಧಿ ಇಲಾಖೆಯಲ್ಲಿ ಮಿತವ್ಯಯ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಇದಕ್ಕೆ 49,15,000 ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದಾರೆ. ಇದರಲ್ಲಿ 27,25,000 ರೂಪಾಯಿಗಳನ್ನು ಹರಿಜನ ಉದ್ಧಾರಕ್ಕೂ ಉಳಿದಿರುವುದನ್ನು ಗ್ರಾಮೋಭಿವೃದ್ಧಿಗೂ ಮೀಸಲಾಗಿಟ್ಟಿದೆ. ಇದರಲ್ಲಿ ಡಿಸ್ಟ್ರಿಕ್ಟ್ ಸಿಬ್ಬಂದಿಗೆ 17,800 ರೂಪಾಯಿಗಳು, ತಾಲ್ಲೂಕು ಸಿಬ್ಬಂದಿಗೆ 1,56,000 ರೂಪಾಯಿಗಳು ಮೀಸಲಾಗಿಡಲ್ಪಟ್ಟಿದೆ. ಇದನ್ನು ನೋಡಿದರೆ ಸುಮಾರು 2 ಲಕ್ಷ ರೂಪಾಯಿಗಳು ಸಿಬ್ಬಂದಿ ಖರ್ಚಿಗಾಗಿ ಈ ದಿವಸ ಉಪಯೋಗವಾಗಲಿದೆ. ಇದನ್ನು ಉಳಿಸಲು ಒಂದು ಅವಕಾಶವಿದೆ. ಆದರೆ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲವಲ್ಲಾ ಎಂದು ವ್ಯಥೆಪಡಬೇಕಾಗಿದೆ. ಗ್ರಾಮಪಂಚಾಯಿತಿ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಸಂಬಂಧಪಟ್ಟ ಆಕ್ಟ್ ಪ್ರಕಾರ ರೂರಲ್ ಡೆವಲಪ್‌ಮೆಂಟ್ ಕೆಲಸವನ್ನು ಈ ದಿವಸ ಡಿಸ್ಟ್ರಿಕ್ಟ್ ಬೋರ್ಡುವಹಿಸಬೇಕಾಗಿದೆ. ಈಗ ಡಿಸ್ಟ್ರಿಕ್ಟ್ ಬೋರ್ಡು ವಜಾಆಗಿ ಅದರ ಸ್ಥಾನದಲ್ಲಿ ಡೆಪ್ಯುಟಿಕಮೀಷನರಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡ್ ವಶದಲ್ಲಿದ್ದ ಇಂಜಿನಿಯರಿಂಗ್ ಸಿಬ್ಬಂದಿಯನ್ನು ಉಪಯೋಗಿಸಿಕೊಂಡು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಸಿಬ್ಬಂದಿಯನ್ನು ವಜಾಮಾಡುವುದಕ್ಕೆ ಅವಕಾಶವಿದೆ. ಇಂಥ ಅವಕಾಶವನ್ನು ಉಪಯೋಗಿಸಿಕೊಳ್ಳದಿದ್ದರೆ ಮಿತವ್ಯಯ ಮಾಡಲು ಅವಕಾಶವಿಲ್ಲ. ಆದ್ದರಿಂದ ಈ ವಿಷಯದಲ್ಲಿ ಯೋಚನೆಮಾಡಿ ಸರ್ಕಾರದವರು ಜಾಗರೂಕತೆಯಿಂದ ಈ ಸಿಬ್ಬಂದಿಯನ್ನು ರದ್ದು ಮಾಡಬೇಕು. ಈ ವಿಚಾರದಲ್ಲಿ ಒಂದು ಸಂಶಯವಿದೆ. ಪಂಚಾಯ್ತಿ ಆಕ್ಟ್ ಪ್ರಕಾರ ರೂರಲ್ ಡೆವಲಪ್‌ಮೆಂಟ್ ಇಲಾಖೆ ಸಿಬ್ಬಂದಿಯನ್ನು ರೆವೆನ್ಯೂ ಇಲಾಖೆ ಕಂಟ್ರೋಲಿಗೆ ವಹಿಸಿದರೆ ಅವರ ಸರ್ವಿಸ್ ಏನಾಗುತ್ತದೆಯೋ ಎಂಬ ಸಂಶಯವಿದೆ. ಅದನ್ನು ನಿವಾರಣೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯ.

Rural Water Supply ಸ್ಕೀಮನ್ನು ಇದರಲ್ಲಿ ಸೇರಿಸಿರುವುದು ಕಂಡುಬರುತ್ತದೆ. ಈ ಕೆಲಸವನ್ನು 1941 ರಲ್ಲಿ ಬಹುಶಃ ಶ್ರೀ ಗುಂಡಪ್ಪಗೌಡರು ಮಂತ್ರಿಗಳಾಗಿದ್ದ ಕಾಲದಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಆಗ ತಂದಿದ್ದ 9 ಬೋರ್‌ವೆಲ್ ಮೆಷೀನುಗಳು ಸರ್ಕಾರದ ವಶದಲ್ಲಿವೆ. ಅವನ್ನು ಉಪಯೋಗಿಸಿ ಎಲ್ಲಿ ಬಾವಿ ತೆಗೆಯಲು ಸಾಧ್ಯವಿಲ್ಲ, ಎಲ್ಲಿ ನೀರಿಲ್ಲ ಅಂಥ ಕಡೆ ಬೋರ್ ಮಾಡಿ ನೀರು ಸರಬರಾಯಿ ಮಾಡುತ್ತಿದ್ದರು. ಅವು ಏನಾದುವೋ ಗೊತ್ತಿಲ್ಲ. ಸರ್ಕಾರಕ್ಕೆ ಗೊತ್ತಿದೆಯೋ, ಇಲ್ಲವೋ, ಹಿಂದೆ ತೆಗೆದ ಬೋರ್‌ವೆಲ್ಸನ್ನು ಉಪಯೋಗಿಸುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಹಾಗೆ ತೆಗೆಸಿದ ಬಾವಿಗಳನ್ನು ಉಪಯೋಗಿಸಲು ಗ್ರಾಮಾಂತರಗಳಲ್ಲಿ ಅವಕಾಶಮಾಡದಿರುವುದು ಕರ್ತವ್ಯಲೋಪ. ಈಗಲಾದರೂ ಸಂಸ್ಥಾನಾದ್ಯಂತ 1941 ರಿಂದ 1943ರ ವರೆಗೆ ಎಷ್ಟು ಬಾವಿಗಳನ್ನು ತೆಗೆಸಿದ್ದಾರೋ ಅವು ಈ ದಿವಸ ಯಾವ ರೀತಿಯಲ್ಲಿವೆ, ಅವುಗಳಿಂದ ಗ್ರಾಮಾಂತರಗಳವರಿಗೆ ಪ್ರಯೋಜನ ದೊರೆಯುತ್ತಿದೆಯೇ ಎಂಬುದನ್ನು ನೋಡಿ ಸರಿಪಡಿಸಬೇಕು. ನಾನು ಈ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಈ ಸಂಬಂಧವಾಗಿ ಹಾಕಿದ್ದೆ. ಅದರಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಎಷ್ಟು ಬೋರ್‌ವೆಲ್‌ಗಳಿವೆಯೆಂದೂ, ಅವುಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆಯೇ ಎಂದೂ ಕೇಳಿದಾಗ ಅನೇಕ ಬೋರ್‌ವೆಲ್‌ಗಳನ್ನು ತೆಗೆಸಿದೆ, ಆದರೆ ಜನರು ಅವುಗಳ ಪ್ರಯೋಜನ ಪಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಹಾಗಿರುವಾಗ ಇದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಮುಂದೆಯೂ ಸಹ ಬೋರ್‌ವೆಲ್ ಯಂತ್ರವನ್ನುಪಯೋಗಿಸಿ ಯಾವ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳಿಲ್ಲದೆ ನೀರಿಗೆ ತೊಂದರೆಯಿದೆಯೋ ಅಲ್ಲಿ ಮತ್ತು ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಭಾವಿಗಳನ್ನು ತೆಗೆಸಿ ಬೋರ್‌ವೆಲ್ಸಿನಿಂದ ನೀರು ಸರಬರಾಯಿಮಾಡಬೇಕು. ಗ್ರಾಮಾಂತರಗಳಲ್ಲಿ ಸಾಮಾನ್ಯವಾಗಿ ಎಲ್ಲೆಲ್ಲಿ ಬಾವಿಗಳನ್ನು ತೆಗೆಸಬೇಕೆಂದು ಸರ್ಕಾರ ಯೋಜನೆ ಮಾಡಿದೆಯೋ ಅಲ್ಲೆಲ್ಲಾ ಬೋರ್‌ವೆಲ್‌ಗಳನ್ನು ತೆಗೆಸಿ ನೀರಿಗೆ ತಕ್ಕ ಸೌಕರ್ಯಕಲ್ಪಿಸಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಕೆಲವು ಗಮನಾರ್ಹವಾದ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಗ್ರಾಮಾಭಿವೃದ್ಧಿಯೆಂಬುದು ಬಹಳ wide term. ಗ್ರಾಮಾಭಿವೃದ್ಧಿಗೆ ನಾವು ಸಾಮಾನ್ಯವಾಗಿ ಯಾವ ಸಂಸ್ಥಾನದಲ್ಲಾಗಲಿ ಅಥವಾ ಯಾವ ದೇಶದಲ್ಲಾಗಲಿ ಬಹಳ ದೂರದೃಷ್ಟಿಯಿಂದ ಮತ್ತು ವಿವೇಚನೆಯಿಂದ ಒಂದು ಯೋಜನೆಯನ್ನು ಹಾಕಿಕೊಂಡು ಮುಂದುವರಿಯಬೇಕು. ನಮ್ಮಲ್ಲೂ ಯೋಜನೆಯಿದೆ; ಪಂಚವಾರ್ಷಿಕ ಯೋಜನೆಯಿದೆ. ಅದರ ಅಂಗವಾಗಿ ಸಂಸ್ಥಾನದವರೂ ಸಹ ಅದಕ್ಕೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳನ್ನು ಒದಗಿಸಿರುತ್ತಾರೆ. ಈ ಗ್ರಾಮಾಭಿವೃದ್ಧಿ ಯಾವ ರೀತಿಯಿದೆಯೆಂಬುದನ್ನು ತಿಳಿಯಲು ಕೆಲವು ಹಳ್ಳಿಗಳಿಗೆ ಹೋದಾಗ ಕೆಲವು ರೈತರನ್ನು ಮತ್ತು ವಯಸ್ಸಾದ ಯಜಮಾನರನ್ನು ಕೇಳಿದೆವು. ನಿಮ್ಮ ಗ್ರಾಮಗಳ ಉದ್ಧಾರಮಾಡಲು ಸಲಹೆಕೊಡಿ, ನಾವ ಯಾವ ರೀತಿ ಅಭಿವೃದ್ಧಿ ಮಾಡಬಹುದೆಂದು ಸೂಚನೆ ಕೊಡಿ ಎಂದು ಕೇಳಿದ್ದಕ್ಕೆ ಒಬ್ಬ ಅನುಭವವಿರುವ ಯಜಮಾನರು ನಮಗೆ ಮುಖ್ಯವಾಗಿ ಬೇಕಾದ ಕುಡಿಯುವ ನೀರಿಗೇ ಸಾಕಷ್ಟು ಸೌಕರ್ಯಮಾಡಿಲ್ಲ, ಅದು ಮಾಡದ ಹೊರತು ಗ್ರಾಮಾಭಿವೃದ್ಧಿಯಾಗುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಕುಡಿಯುವ ನೀರಿಲ್ಲವೆಂದು ಅವರು ಹೇಳಿದಾಗ ಅದನ್ನು ಕೇಳಿ ಬಹಳ ಕನಿಕರವಾಯಿತು. ನಮ್ಮ ಜಿಲ್ಲೆಯಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ಹೇಳಬಹುದು. ಕುಡಿಯುವ ನೀರಿನ ಬಾವಿಗಳಿಲ್ಲದ ಅನೇಕ ಗ್ರಾಮಗಳಿವೆ. ಹಿರಿಯೂರು ತಾಲ್ಲೂಕಿನ ಒಡ್ಡರಹಟ್ಟಿಯಲ್ಲಿ ನೀರನ್ನು ತರಲು ಹೋಗಿ ಒಂಡಿನಲ್ಲಿ ಸಿಕ್ಕಿ ಸತ್ತಿರುವ ನಿದರ್ಶನವಿದೆ. $1\frac{1}{2}$ ವರ್ಷದ ಕೆಳಗೆ ಅಲ್ಲಲ್ಲಿ ಹುಡುಗರು ನೀರು ತರುವಾಗ ಬಿದ್ದು ಸತ್ತಿರುವ ಉದಾಹರಣೆಗಳಿವೆ. ಸರ್ಕಾರದವರೇನೋ ಯೋಜನೆಮಾಡಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಸಂಸ್ಥಾನದಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳಿಗೂ ನೀರು ಸರಬರಾಯಿಗಾಗಿ ಒಂದು ಸುವ್ಯವಸ್ಥಿತವಾದ ಯೋಜನೆ ಮಾಡಿದ್ದೇವೆ, ಸಾಲ ಕೊಡಲು ಸುಮಾರು $2\frac{1}{4}$ ಕೋಟಿ ರೂಪಾಯಿಗಳ ಅಂದಾಜಿದೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಆವಶ್ಯಕತೆಯ ಕಡೆ ಅವರ ಗಮನ ಬಿದ್ದಿದೆಯೋ ಇಲ್ಲವೋ ತಿಳಿಯದು. ಸರ್ಕಾರದ ಗಮನ ಆ ಕಡೆ ಬಿದ್ದ

ಹಾಗೆ ಕಾಣುವುದಿಲ್ಲ. ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗೆ ನಮ್ಮ ಸರ್ಕಾರ ಒಂದು ಕೋಟಿ ರೂಪಾಯಿಗಳ ಸಾಲ ಅಥವ ಗ್ರ್ಯಾಂಟನ್ನು ಒದಗಿಸಿ ನೀರು ಸರಬರಾಯಿಗೆ ಅವಕಾಶ ಮಾಡಲು ಹೊರಟು ಗ್ರಾಮಾಂತರ ಪ್ರದೇಶಗಳ ಕಡೆ ಸರ್ಕಾರ ಸರಿಯಾಗಿ ನಿಗಾಕೊಟ್ಟಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಹೋದ ವರ್ಷ ಒಂದು ಲಕ್ಷ ರೂಪಾಯಿಗಳನ್ನ ಈ ವರ್ಷ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಹಂಚಿದರೆ ಒಂದೊಂದು ಡಿಸ್ಟ್ರಿಕ್ಟಿಗೆ ಸುಮಾರು ಒಂದು ಲಕ್ಷ ಬರುತ್ತದೆ. ಇನ್ನೂ ಡಿಸ್ಟ್ರಿಕ್ಟ್‌ವಾರು ಅಲಾಟ್‌ಮೆಂಟ್‌ಮಾಡಿಲ್ಲ. ಅಂದಾಜು ಇಷ್ಟು ಬರಬಹುದು. ಹೋದ ವರ್ಷ ಚಿತ್ರದುರ್ಗ ಜಿಲ್ಲೆಗೆ 20 ಸಾವಿರ ರೂಪಾಯಿಗಳನ್ನು ಮಾತ್ರ ಕುಡಿಯುವ ನೀರಿಗಾಗಿ ಕೊಟ್ಟಿದ್ದರು. ಆದರೆ ಸರ್ಕಾರದವರು ಕೊಟ್ಟಿರುವ ಉತ್ತರದ ಪ್ರಕಾರ 20 ಸಾವಿರ ರೂಪಾಯಿಗಳಲ್ಲಿ 15 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆಯೆಂದು ಹೇಳಿದ್ದಾರೆ. ಇದಲ್ಲದೆ ಕೆಲಸ ಪೂರ್ತಿಯಾಗಿಲ್ಲದೆ ಅರ್ಧವಾಗಿರುವ ಬಾವಿಗಳಿಗೆ 1,81,000 ರೂಪಾಯಿಗಳನ್ನು ಪೆಂಡಿಂಗ್ ಬಿಲ್ಸ್‌ಗೆ ಕೊಡಬೇಕಾಗಿದೆಯೆಂದು ಹೇಳಿದ್ದಾರೆ. ಕೊಟ್ಟಿರುವ ಅಲ್ಪ ಹಣವಾದ 20 ಸಾವಿರದಲ್ಲಿ 15 ಸಾವಿರ ಮಾತ್ರ ಖರ್ಚಾಗಿರುವುದಾಗಿ ಡೆಪ್ಯುಟೀ ಕಮಿಷನರಿಂದ ವರದಿ ಬಂದಿದೆಯೆಂದು ಹೇಳಿದ್ದಾರೆ. ಸರ್ಕಾರವರು ಕುಡಿಯುವ ನೀರಿನ ವಿಷಯದಲ್ಲಿ ಎಷ್ಟು ಸೀರಿಯಸ್ಸಾಗಿದ್ದಾರೆ, ಎಷ್ಟು ಮನಸ್ಸುಮಾಡಿ ನಿಗಾವಹಿಸಿದ್ದಾರೆ ಎಂಬುದನ್ನು ಸಭೆ ಗಮನಕ್ಕೆ ತರಲು ಇಷ್ಟು ಹೇಳಬೇಕಾಯಿತು. ಅಷ್ಟೇ ಹೊರತು ಇನ್ಯಾವ ಉದ್ದೇಶವೂ ಇಲ್ಲ.

11-30 A.M.

ಇನ್ನೊಂದು ವಿಚಾರ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಭಾವಿಗಳಿಗಾಗಿ ಸ್ವಲ್ಪ ಹಣ ಖರ್ಚಾಗಿದೆ, ಅಲ್ಲಿ ನೀರಿನ ಅಭಾವವಂತೂ ಹೇಳತೀರದು. ಇದರಿಂದ ಆ ಪ್ರದೇಶದ ಹೆಣ್ಣು ಮಕ್ಕಳಿಗೆ ಎಷ್ಟು ಕಷ್ಟವಾಗುತ್ತಿದೆಯೆಂಬುದನ್ನು ಸರ್ಕಾರದವರು ಮನಸ್ಸಿಗೆ ತಂದುಕೊಳ್ಳಬೇಕು. ನೀರಿಗೆ ಅಭಾವವಾಗಿದೆಯೆಂದು ಅಲ್ಲಿ ಬೋರ್ ವೆಲ್‌ಗಳನ್ನು ತೆಗೆಸಿದ್ದಾರೆ. ಕೆಲವು ಕಡೆಗಳಲ್ಲಿ ಇದಕ್ಕೆ ವಿಪರೀತ ಹಣ ಖರ್ಚಾಗುತ್ತದೆಂಬ ಕಾರಣದ ಮೇಲೆ ಇದರ ಕೆಲಸವು ಅರ್ಧಕ್ಕೇ ನಿಂತಿದೆ. ಈ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ನೀರಿನ ಬಣ್ಣಕ್ಕೂ ಟೀ ಬಣ್ಣಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಇದೇ ನೀರನ್ನೇ ಅಲ್ಲಿಯ ಜನರು ಕುಡಿಯಬೇಕು. ನಮ್ಮ ಊರಿನಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರು ಹಿಂದುಳಿದ ಜನಾಂಗ, ಇವರಿಗೆ ಕುಡಿಯುವ ನೀರಿನ ಬಾವಿಯೊಂದನ್ನು ತೆಗೆಸಿಕೊಡೋಣವೆಂದು ಸರ್ಕಾರದವರು ಅಲ್ಲಿ ಒಂದು ಕಡೆ ಗುಂಡಿ ತೆಗೆಸಿ ನೀರು ಸೇರುವಂತೆ ಮಾಡಿದರು. ಆದರೆ ಭಾವಿ ಕಟ್ಟಿಸುವ ಕೆಲಸವನ್ನು ನಿಧಾನಮಾಡಿದುದರಿಂದ ಅದರ ಸುತ್ತಮುತ್ತ ಹುಲ್ಲು, ಜೊಂಡು ಬೆಳೆದುಕೊಂಡು ಅದು ಹಾಳುಬಿದ್ದಿದೆ. ಈ ವಿಚಾರವನ್ನು ಅಲ್ಲಿಯ ಡೆಪ್ಯುಟೀ ಕಮಿಷನರ ತಿಳಿವಳಿಕೆಗೆ ತಂದರೂ ಸಹ ಅವರು ಇದಕ್ಕೆ ನಿಗಾಕೊಟ್ಟಿಲ್ಲ. ಅಲ್ಲಿ ಮಳೆಯ ಅಭಾವ ಬಹಳ. ಹೀಗಿರುವಲ್ಲಿ ಅಲ್ಲಿ ನೀರಿನ ಕಷ್ಟವಂತೂ ಹೇಳತೀರದು. ಅಕಸ್ಮಾತ್ ಹರಿಜನ ಕೇರಿಗೆ ಗುಡಿಸಲು ಕಟ್ಟಿಕೊಂಡಿರುವ ಮನೆಗಳಿಗೆ ಬೆಂಕಿ ಬಿದ್ದಾಗ ಆರಿಸುವುದಕ್ಕೆ ಸಹ ನೀರಿಲ್ಲ. ಇಂಥ ಶೋಚನೀಯ ಪರಿಸ್ಥಿತಿ ಒದಗಿದೆ. ಸರ್ಕಾರದವರು ಈ ಜಿಲ್ಲೆಯ ವಿಚಾರದಲ್ಲಿ ವಿಶೇಷ ನಿಗಾ ಕೊಟ್ಟು, ಇಲ್ಲಿ ಯಾವ್ಯಾವ ಗ್ರಾಮಗಳಿಗೆ ಬಾವಿ ಇಲ್ಲ ಎಂಬುದನ್ನು ತಿಳಿದು ಅವುಗಳಿಗೆಲ್ಲಾ ಎಸ್ಟಿಮೇಟ್‌ಮಾಡಿಸಿ ಇದಕ್ಕಾಗಿ ಲಕ್ಷಗಟ್ಟಲೆ ರೂಪಾಯಿ ಖರ್ಚಾದರೂ ಮನಸ್ಸಿಗೆ ತೆಗೆದುಕೊಳ್ಳದೆ ಈ ಬಗ್ಗೆ ಒಂದು ಯೋಜನೆ ತಯಾರಿಸಿ ಈ ಜಿಲ್ಲೆಯ ಪ್ರತಿ ಗ್ರಾಮದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಗ್ರಾಮಾಭಿವೃದ್ಧಿಕಾರ್ಯವೆಂಬುದು ಪ್ರಾಮುಖ್ಯತೆಯ ವಿಚಾರವೆಂಬುದನ್ನು ನಾನು ಒತ್ತಿ ಹೇಳಬೇಕಾದುದಿಲ್ಲ. ಪ್ಲಾನಿಂಗ್ ಕಮಿಷರ್ನರವರು ಸಹ ತಮ್ಮ ವರದಿಯಲ್ಲಿ ಗ್ರಾಮಾಭಿವೃದ್ಧಿಕಾರ್ಯ ಬಹಳ ಮುಖ್ಯವಾದುದು ಎಂದು ಹೇಳಿದ್ದಾರೆ. ಈಗ ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತದಲ್ಲಿದ್ದಂತಹ ಗ್ರಾಮಾಭಿವೃದ್ಧಿಕಾರ್ಯ ಅವರ ಕೈತಪ್ಪಿ ಸರ್ಕಾರದ ವಶಕ್ಕೆ ಬಂದಿರತಕ್ಕ ಕಾಲದಲ್ಲಿ ಸರ್ಕಾರ ನೇರವಾಗಿ ತಮ್ಮ ಏಜೆನ್ಸಿ ಮೂಲಕ—ಡೆಪ್ಯುಟಿ ಕಮಿಷನರ ಮತ್ತು ರೆವಿನ್ಯೂ ಅಧಿಕಾರಿಗಳ ಮೂಲಕ—ಕೆಲಸ ಮಾಡಿಸಬೇಕಾಗಿ ಬಂದಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳಿಗಿಂತಲೂ ಗ್ರಾಮಾಭಿವೃದ್ಧಿಕಾರ್ಯ ಅತಿ ಮುಖ್ಯವಾದುದೆಂದು ನಾನು ಸರ್ಕಾರದ ಗಮನಕ್ಕೆ ಒತ್ತಾಯಪೂರ್ವಕವಾಗಿ ತಿಳಿಸಬೇಕಾಗಿದೆ. ಅಲ್ಲದೆ ಹಿಂದಿನ ಮಂತ್ರಿಮಂಡಲ ಬದಲಾವಣೆಯಾಗಿ ಇಂದಿನ ಮಂತ್ರಿಮಂಡಲ ಬಂದ ಮೇಲೆ ಇವರು ಹಾಕಿಕೊಂಡಿರುವ ಕಾರ್ಯನೀತಿ ಬದಲಾವಣೆಹೊಂದಿ ಅವರು ಮಾಡಿರುವ ನಿರೀಕ್ಷಣೆಯಷ್ಟು ಕಾರ್ಯ ಸಾಧನೆಯಾಗುತ್ತಿಲ್ಲ, ಇದಕ್ಕೆ ಕಾರಣವನ್ನು ಕಂಡುಹಿಡಿದು ಸರ್ಕಾರದವರು ಈ ಬಗ್ಗೆ ಹೆಚ್ಚು ನಿಗಾ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮಂತ್ರಿ ಮಂಡಲದಲ್ಲಿ ಇದಕ್ಕಾಗಿಯೇ ಒಬ್ಬರು ಮಂತ್ರಿ ಇರತಕ್ಕದು ಅಗತ್ಯವೆಂಬುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಗ್ರಾಮಾಭಿವೃದ್ಧಿಕಾರ್ಯದ ಬಗ್ಗೆ ಒಂದು ನಿರ್ದಿಷ್ಟ ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವುದು ಅತ್ಯಗತ್ಯ. ಪ್ಲಾನಿಂಗ್ ಕಮಿಷನರ್ ಸಹ ಅವರ ವರದಿಯಲ್ಲಿ "The principle envisaged in the plan is the agricultural and rural development" ಎಂದು ಹೇಳಿರುತ್ತಾರೆ. ಇದನ್ನು ನಮ್ಮ ಸರ್ಕಾರದವರು ಮನಗಂಡಂತೆ ಕಾಣುವುದಿಲ್ಲ. ಈ rural development ಎಂಬುದನ್ನೇ ಧ್ಯೇಯವಾಗಿಟ್ಟುಕೊಂಡಿರುವ ಈ ಮಂತ್ರಿಮಂಡಲದವರು ಅದರ ವ್ಯವಸ್ಥೆಯನ್ನು ಬೇರೆಯವರ ಮೇಲ್ವಿಚಾರಣೆಗೆ ಬಿಟ್ಟು ಆ ಬಗ್ಗೆ ಹೆಚ್ಚು ಅಭಿವೃದ್ಧಿಯಾಗುತ್ತದೆಂದು ಹೇಳುತ್ತಿದ್ದಾರೆ. ಅಭಿವೃದ್ಧಿಕಾರ್ಯದಲ್ಲಿ backward communities—depressed class ವಿಚಾರ ಸಹ ಸೇರಿರುತ್ತದೆ. ಇದರ ಬಗ್ಗೆ ಸರ್ಕಾರದ ಏಜೆನ್ಸಿ ನಿಮ್ನ ವರ್ಗದವರ ಅಭಿವೃದ್ಧಿಗಾಗಿ State level ನಲ್ಲಿ ಒಬ್ಬ ಕಮಿಷನರ್, ಡಿಸ್ಟ್ರಿಕ್ಟ್ levelನಲ್ಲಿ ಒಬ್ಬ ಸ್ಪೆಷಲ್ ಆಫೀಸರ್, ತಾಲ್ಲೂಕು level ನಲ್ಲಿ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರು ಇದ್ದಾರೆ. ಆದರೆ ನಿರೀಕ್ಷಣೆಯಷ್ಟು ಕೆಲಸವಾಗುತ್ತಿಲ್ಲವೆಂದು ಹೇಳಬೇಕಾಗುತ್ತೆ. ಈ ಬಗ್ಗೆ ಅವರಿಂದ ಹೆಚ್ಚಿನ ಕೆಲಸ ತೆಗೆದುಕೊಳ್ಳುವುದು ಅಗತ್ಯ. ಅಲ್ಲದೆ ಸರ್ಕಾರದವರು ಉದಾರವಾದ ನೀತಿಯನ್ನು ಅನುಸರಿಸಿ ಹೆಚ್ಚಿನ ಪ್ರಮಾಣದಲ್ಲಿ ಇದಕ್ಕಾಗಿ ಹಣವನ್ನೊದಗಿಸಬೇಕು. ನಿಮ್ನವರ್ಗದವರ ಅಭಿವೃದ್ಧಿ ಸಾಧನೆಯ ವಿಚಾರದಲ್ಲಿ ಸರ್ಕಾರದವರು ಕಮಿಷನ

(ಶ್ರೀ ಎಂ. ಮಾದಯ್ಯ.)

ರಿಗೂ ಮತ್ತು ಆಯಾ ಸ್ಥಳೀಯ ಅಧಿಕಾರಿಗಳಿಗೂ ಹೆಚ್ಚಿನ ನಿಗಾ ಕೊಡಬೇಕೆಂಬ ಬಗ್ಗೆ ತಿಳಿವಳಿಕೆ ಕೊಡುವುದು ಅಗತ್ಯ. ಈ ಅಂಶವನ್ನು ಇದರ ಪೋರ್ಟ್‌ಫೋಲಿಯೋ ಮಂತ್ರಿಗಳಾದ ನಮ್ಮ ಮುಖ್ಯಮಂತ್ರಿಗಳು ಮತ್ತು ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಪಟ್ಟ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಯ ಮಂತ್ರಿಗಳೂ ಗಮನಿಸಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಳ್ಳದೆ ಹೋದರೆ ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಸದ್ವಿನಿಯೋಗವಾಗದೇ ಹೋಗಬಹುದು. ಇದಕ್ಕಾಗಿ ಪ್ರತ್ಯೇಕವಾಗಿ ಒಬ್ಬ ಕಮಿಷನರು ಇದ್ದಾರೆ. ಅವರು ದೇಶಾದ್ಯಂತ ಆಯಾ ಸ್ಥಳೀಯ ಅಧಿಕಾರಿಗಳ ಸಹಾಯದಿಂದ ತಮ್ಮ ಕಾರ್ಯವನ್ನು ನಿರ್ವಿಘ್ನವಾಗಿ ಸಾಧಿಸಿಕೊಂಡು ಹೋಗಲು ಸಹಕಾರಿಯಾಗುವಂತೆ ಈ ವಿಚಾರವನ್ನು Cabinet level ನಲ್ಲಿ ಪರಿಶೀಲಿಸಿ ಈ ಬಗ್ಗೆಯ ಕಾರ್ಯಕ್ರಮ ಅರಣ್ಯರೋಧನವಾಗದಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri J. MOHAMED IMAM (Jagalur).–Sir, rural development work is the most important work that the Government can undertake because it affects the well-being and welfare of 8 millions of people who are living in the rural areas. But the allotment made for their welfare is very inadequate. The allotment made during this year is Rs. 49,15,000 and if we deduct from this amount, the amount set apart for Harijan welfare which comes to Rs. 27,35,000, we have only a sum of Rs. 21,29,000 which is to be spent on the rural development work to promote the welfare of the rural masses. This is inadequate and quite insufficient. Out of this amount, the amount actually set apart for improvement work is: For works outlay Rs. 12,64,000; local development work Rs. 6,35,000. There is no allotment for rural communication. There is no amount set apart for rural sanitation, for rural health or for the improvement of drainage in rural areas. They have set apart only Rs. 6,35,000 for local development works and details are not given. I think Government seems to be thinking that this is an optional item which they may or may not undertake. What we have to consider is this. We are faced with an estimate of Rs. 12,00,000 for works outlay and Rs. 6,00,000 lakhs towards the local development work; whether this is quite sufficient, is the question. Sri Duggappa has suggested that a survey has to be made of the entire State to find out the actual needs of the rural areas. Sir, various experiments have been tried from the beginning to improve the conditions of our rural population. When Sri Gundappa Gowda held this important portfolio, he introduced various schemes for rural uplift and rural development and he employed the services of *Gramasudharakas* and the Government were making substantial allotment towards drinking water wells, sanitation and rural communication. This scheme was followed by another scheme which the previous Government launched for the purpose of rural development; and various development committees – rural development committees, taluk development committees were constituted to carry on this work and substantial grants were set apart and were made available to those committees. But despite the work of these committees, the condition of the villages still remains deplorable. The state of affairs at present is that the Government are not in a position to tackle this important problem of rural development; and we find for the last two or three years, the important work of providing drinking water wells to the villages is very much neglected. The district boards are finding themselves helpless and they have almost shoved this responsibility on the Government. The Government says that the responsibility is on the district boards and between the district boards and the Government, the villagers have to suffer. During the last three years, it has been found that this important work has been neglected. Last year, the amount spent for the entire State towards water supply is only three lakhs —Rs. 3,63,000 to be accurate; and it was pointed out in the course of the question-hour that this amount would hardly touch the fringe of the problem. This year, they have made an allotment of ten lakhs. I would like to know what is their existing commitment for the completion of the incomplete wells. It was pointed out the other day by the Hon'ble Minister for Rural Development that they need more than 25 lakhs to complete the existing wells; if so, where is the provision?

Sri T. CHANNIAH—About 16 lakhs.

Sri J. MOHAMED IMAM.—Sixteen lakhs you need to complete the incomplete wells? Have you set apart that amount? If you allot only 10 lakhs, it is impossible for you to undertake new wells. I can tell you, Sir, that there are thousands of villages without drinking water wells. And again, Sir, I find this year that no provision has been made towards rural communication. That is a very important work. Many of the villages I dare say have no communication with bigger cities and you have not made any allotment towards rural communication. There was an allotment of Rs. 4,89,000 during the year 1951-52; during 1953-54, the allotment was one lakh as against which there has been an allotment of Rs. 81,000 for the next year. This is an important work and you should not neglect. In this connection I must also point out the state of existing rural communications —inter-village communication roads. Government takes credit that they spent nearly one crore of rupees towards this inter-village communication. It is true that they have spent a substantial amount. But there is no provision in the budget towards their maintenance and upkeep. Unless some care is bestowed on these roads, unless Government takes adequate measures for their maintenance, I caution the Government that the entire amount they have spent in bringing these roads into being will be a waste. Many of these roads that have been constructed at great cost are now practically useless and unless Government make proper provision for their maintenance, the entire amount that has been spent may go to waste and I am sorry that the Government have not realised the seriousness of this problem.

In this connection, Sir, I would like to make a suggestion to the Government. If they are unable to find necessary funds for the repairing of these roads, I would suggest to them that they insist on every panchayat to set apart 5 per cent, if possible 10 per cent, of their income; pool all this sum together and devote it for their maintenance. The Government also may contribute an equal amount. If the income from all the Panchayats is about Rs. 20 lakhs, if they set apart 10 per cent, they will get about 2 lakhs and if Government contribute another two lakhs and earmark this amount for the maintenance of these inter-village roads, a lot of good work can be done.

Sir, I must also point out another aspect of the rural development work. After all, what is it that the villages require? A village requires a school, medical facilities for a group of villages and drinking water-wells, sanitation and rural communication. As pointed out by Sri Duggappa, the Government must undertake a survey of the entire State. They must find out how many villages need drinking water wells, how many villages need improvement in sanitation; they must make a survey of the entire State and ascertain how many drinking water wells are needed and prepare a comprehensive programme. After preparing such a programme, they must find out how much amount they can set apart every year for this development work. They must have a comprehensive idea of the work before them before making any budget allotment. They must know what work is needed to be done; what amount of work has been already done and how much is pending and then provide suitable amounts in proportion to the magnitude of work that is expected to be taken up. Otherwise, such a budget provision like Rs. 10,00,000 will be a mere eye-wash! This provision of Rs. 10,00,000 will not bring any new well and what is more, my fear is that even this sum of Rs. 10,00,000 may not be spent before the close of the year. I must also point out that no amount has been set apart towards sanitation and other important works. Details are not given and I am afraid that this sum may not be utilised. I hope the Hon'ble Minister may give us the details as to which purpose this allotment has been made and for which purpose this will be utilised.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ನಾನು ಮಲೆನಾಡು ಅಭಿವೃದ್ಧಿಯ ವಿಷಯವಾಗಿ ಖೋತಾ ಸೂಚನೆಯನ್ನು ಕಳುಹಿಸಿದ್ದೆ. ಅದನ್ನು ಮಂಡಿಸಲು ಅವಕಾಶವಿಲ್ಲದ್ದರಿಂದ ಮಲೆನಾಡು ಅಭಿವೃದ್ಧಿ ವಿಚಾರವಾಗಿ ಒಂದೆರಡು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಮಲೆನಾಡು ಅಭಿವೃದ್ಧಿಯಾಗಬೇಕೆಂದು ಅದಕ್ಕಾಗಿ ಸಮಿತಿಯನ್ನು ರಚಿಸಿದ್ದರು. ಆದರೆ ಅದರ ವರದಿ ಏನಾಯಿತೋ ಗೊತ್ತಿಲ್ಲ. ಆದರೂ ಸರ್ಕಾರದವರು ಈ ವರ್ಷ ಮಲೆನಾಡಿನ ಅಬಿವೃದ್ಧಿಗಾಗಿ ಹಣಕೊಟ್ಟು ಸೇತುವೆ, ರಸ್ತೆ ಮುಂತಾದುದನ್ನು ಮಾಡಿಸಲು ಏರ್ಪಾಡುಮಾಡಿದ್ದಾರೆಂದು ಸಂತೋಷದಿಂದ ಹೇಳಬೇಕಾಗಿದೆ. ಮಲೆನಾಡು ಬಹಳ ಅಭೂತ ಪೂರ್ವ ಮೂಲೆ, ಬಹಳವಾಗಿ ಹಿಂದುಳಿದಿದೆ, ಅಲ್ಲಿ ಹೆಚ್ಚು ಬೆಲೆಯಿರುವ ಕಾಫಿ, ಏಲಕ್ಕಿ, ಮೆಣಸು ಮುಂತಾದುವು ಬೆಳೆಯುತ್ತವೆ. ಅವನ್ನು ಹೆಚ್ಚಾಗಿ ಬೆಳೆಯಲು ಅನುಕೂಲ ಮಾಡಿದರೆ ಸರ್ಕಾರದ ಆದಾಯವೂ ಹೆಚ್ಚಿ ರೈತರಿಗೂ ಸಹಾಯವಾಗುತ್ತದೆ. ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು.

ಇನ್ನು ಅಲ್ಲಿ ಮುಖ್ಯವಾಗಿ ಬೇಕಾದ್ದು ಆರೋಗ್ಯ ಭಾಗ್ಯ. ಮಲೆನಾಡಿನಲ್ಲಿ ಆಸ್ಪತ್ರೆ ಸ್ಥಾಪನೆಮಾಡಿದ್ದಾರೆ. ಆದರೆ ಲೆಕ್ಕಕ್ಕೆ ಮಾತ್ರ ಆಸ್ಪತ್ರೆಗಳಿದ್ದರೂ ಸುಮಾರು 10-20 ಆಸ್ಪತ್ರೆಗಳಲ್ಲಿ ಚಿಕ್ಕಮಗಳೂರು ಡಿಸ್ಟ್ರಿನಲ್ಲಿ ಡಾಕ್ಟರುಗಳೇ ಇಲ್ಲ. ಚಿಕ್ಕಮಗಳೂರು ಹೆಡ್‌ಕ್ವಾರ್ಟರಿನಲ್ಲಿ ಅಸಿಸ್ಟೆಂಟ್ ಸರ್ಜನ್ ಸಹ ಇಲ್ಲದೆ ತೊಂದರೆಯಾಗಿದೆ. ಮಲೆನಾಡಿನ ಆಸ್ಪತ್ರೆಗಳಲ್ಲಿ ಬಾಣಂತಿಯರಿಗೆ ಮಲಗಲು ಮಂಚಗಳು ಸಾಕಷ್ಟಿಲ್ಲದೆ ಅನೇಕರನ್ನು ನೆಲದಮೇಲೆ ಮಲಗಿಸುತ್ತಿದ್ದಾರೆ. ಇದರಿಂದ ಅವರು ಖಾಯಿಲೆಗೆ ಗುರಿಯಾಗಲು ಅವಕಾಶವಿದೆ. ಆದ್ದರಿಂದ ಮುಖ್ಯವಾಗಿ ಆರೋಗ್ಯ ಮಂತ್ರಿಗಳು ಮನಸ್ಸುಮಾಡಿ ಮಂಚದ ಅನುಕೂಲ ಒದಗಿಸಿಲ್ಲವೆಂದು ಸೂಚಿಸಬೇಕಾಗಿದೆ. ಸರ್ಕಾರ ಕೂಡಲೆ ಈ ವಿಚಾರದಲ್ಲಿ ನಿಗಾ ತೆಗೆದುಕೊಂಡು ಸಾಕಾದಷ್ಟು ಡಾಕ್ಟರುಗಳನ್ನೂ ಮತ್ತು ಬಾಣಂತಿಯರಿಗೆ ಮಂಚಗಳನ್ನೂ ಒದಗಿಸಬೇಕು.

ಅಲ್ಲದೆ ಬಡಜನರು ಬಂದರೆ ಆಸ್ಪತ್ರೆಗಳಲ್ಲಿ ಸರಿಯಾದ ಔಷಧಿ ಕೊಡುವುದಿಲ್ಲ. ಇಂಜೆಕ್ಷನ್ ಕೊಡುವುದಿಲ್ಲ. ಹಣಕೊಟ್ಟು ವೈದ್ಯ ಸಹಾಯಪಡೆಯಲು ಶಕ್ತಿಯಿಲ್ಲದವರಿಗೆ ಉಚಿತವಾಗಿ ಇಂಜೆಕ್ಷನ್‌ಕೊಡಬೇಕಾದ್ದು ಅವಶ್ಯಕ. ಆದ್ದರಿಂದ ಇಷ್ಟು ಇಂಜೆಕ್ಷನ್ ಟ್ಯೂಬುಗಳನ್ನೊದಗಿಸಿದೆ, ಬಡವರಿಗೆ ಉಚಿತವಾಗಿ ಅವನ್ನು ಕೊಡಬೇಕು ಎಂದು ತಿಳಿಸಿ, ಜನರಿಗೆ ಅದು ತಿಳಿಯುವಂತೆ ಮಾಡಿ ಹಣ ಕೊಟ್ಟು ಚಿಕಿತ್ಸೆಪಡೆಯಲು ಶಕ್ತಿಯಿಲ್ಲದಿರುವವರಿಗೆ ಇಂಜೆಕ್ಷನ್ ಪಡೆಯಲು ಅನುಕೂಲ ಕಲ್ಪಿಸಬೇಕು. ಇಲ್ಲದಿದ್ದರೆ ಬಹಳ ಅನ್ಯಾಯವಾಗುತ್ತದೆ.

ಆಮೇಲೆ ಮಲೆನಾಡಿಗೆ ಹೆಚ್ಚು ಅನುಕೂಲವಾಗಬೇಕಾದರೆ ಮಾರ್ಗ ಸೌಕರ್ಯ ಚೆನ್ನಾಗಿರಬೇಕು. ಇಲ್ಲದಿದ್ದರೆ ಯಾರೂ ಅಲ್ಲಿಗೆ ಬರುವುದಿಲ್ಲ. ಈಗ ಮಲೆನಾಡಿನಿಂದ ಮಂಗಳೂರಿಗೆ ರೈಲುಮಾರ್ಗ ಹಾಕಬೇಕೆಂದು ಎಷ್ಟೋ ದಿವಸಗಳಿಂದ ಹೇಳಿದರೂ ಮೈಸೂರು ಸರ್ಕಾರ ಶಿಫಾರ್ಸು ಸಹ ಮಾಡಿಲ್ಲ. ಈ ವಿಚಾರದಲ್ಲಿರುವ ಅನಾನುಕೂಲವನ್ನು ಗಮನಿಸಿ ತಕ್ಕ ರೈಲ್ವೆಸೌಕರ್ಯ ಜಾಗ್ರತೆ ಕಲ್ಪಿಸಬೇಕು.

ಕಟ್ಟಡಗಳ ಅಭಾವ ತಪ್ಪಿಸಲು ಮಲೆನಾಡಿನಲ್ಲಿ ತಕ್ಕ ಕಾರ್ಯಕ್ರಮ ಹಾಕಿಲ್ಲ. ಉದಾಹರಣೆ ಹೇಳುವುದಾದರೆ ಒಬ್ಬ ದೊಡ್ಡ ಅಧಿಕಾರಿಗಳು ಹೇಗೆ ಮಾಡಿದರೆಂಬುದನ್ನು ಹೇಳುತ್ತೇನೆ. ಡಿ.ಎಸ್.ಪಿ. ಯವರು ಮಲೆನಾಡಿಗೆ ಹಾಕಿದಾಗ ಒಂದು ತಿಂಗಳು ಮನೆ ಸಿಗದೆ ಟಿ.ಬಿ. ಯಲ್ಲಿ ಸಂಸಾರ ಸಮೇತ ವಾಸಮಾಡಿ ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಖಾಯಿಲೆ ಬಿದ್ದುದರಿಂದ ರಜ ಪಡೆದು ಅವರು ಹೊರಟು ಹೊದರು. ಹೀಗಾದರೆ ಯಾರುತಾನೆ ಮಲೆನಾಡಿನಲ್ಲಿರಲು ಇಷ್ಟಪಡುತ್ತಾರೆ! ಹೌಸ್‌ಬಿಲ್ಡಿಂಗ್ ಅಡ್ವಾನ್ಸ್ ಮುಂತಾದುವನ್ನು ಕೊಡುವಾಗ ಸಿಟಿಗಳಿಗೆ ಮಾತ್ರ ಕೊಟ್ಟರೆ ಮಲೆನಾಡಿಗೆ ಕೊಡದಿದ್ದರೆ ಅಧಿಕಾರಿಗಳು ಮಲೆನಾಡಿನಲ್ಲಿರಲು ಇಷ್ಟಪಡುವುದಿಲ್ಲವೆಂಬುದನ್ನು ವಿಮರ್ಶೆಮಾಡಿನೋಡಿ ತಕ್ಕ ವ್ಯವಸ್ಥೆ ಮಾಡಬೇಕು.

ಮೈಸೂರಿಗೆ ಸೇರಬೇಕೆಂದು ಆಶಿಸುವ ಎಲ್ಲಾ ಜನರನ್ನೂ ಸ್ವಾಗತಿಸಬೇಕಾದುದು ನಮ್ಮ ಧರ್ಮ. ಅದು ಉದಾರನೀತಿ ಎಂದಿದ್ದಾರೆ. ಈ ಸಮಯದಲ್ಲಿ ಮಲೆನಾಡು ಎಷ್ಟು ನಿರ್ಲಕ್ಷವಾಗಿದೆ. ಹಾಗಿದ್ದೂ ಹೊಸ ಪ್ರಾಂತಗಳು ಸೇರಿದಮೇಲೆ ಮಲೆನಾಡಿನ ಅಭಿವೃದ್ಧಿ ಖಂಡಿತ ನಿಂತುಹೋಗುತ್ತದೆ. ಸರಿಯಾದ ರಸ್ತೆಯಿಲ್ಲ; ಸೇತುವೆಯಿಲ್ಲ; ಸ್ಕೂಲು ಇಲ್ಲ. ಇವೆಲ್ಲಾ ಸರಿಯಾಗಬೇಕಾದರೆ ಮಲೆನಾಡನ್ನೇ ಒಂದು ಪ್ರಾಂತ್ಯವನ್ನಾಗಿ ಮಾಡಬೇಕು. ಇಲ್ಲವಾದರೆ ಖಂಡಿತ ಮಲೆನಾಡು ಹಾಳಾಗುತ್ತದೆ ಎಂತ ಇದನ್ನು ಸಮರ್ಥಿಸುತ್ತೇನೆ.

Sri T. CHANNIAH (Minister for Public Health and Local Self-Government).—Mr. Speaker, Sir, within the short time available at my disposal I wish to meet some of the points urged by my friends. I am happy to see the keen interest displayed in the matter of rural water supply. As has been felt by the members of this House and by the people living in rural areas, the need for providing good drinking water supply in villages is urgent and the problem needs to be tackled in right earnest. Government are not only alive to the situation but have been taking all possible steps in this direction. Despite a deficit budget, Government have provided a sum of Rs. 10 lakhs for the purpose. A sum of Rs. 7 lakhs will be made available out of Land Revenue Assignments. 2090 well works are in various stages of progress. Pending claims of contractors will have to be settled. Fresh works will be started wherever necessary, after a detailed examination and in order of priority as decided by the Deputy Commissioners and other local officers. In this connection I might mention that a target of 10,805 well works was aimed at under the Five-Year-Plan. 8149 well works have been completed by the end of March 1953 and 2666 well works have been started and are in several stages of progress. All these works would be completed by the

end of next year. Some members pointed out that the amount allotted in the Budget from the land revenue assignment is not sufficient. I may assure the House that every possible action would be taken from the land revenue assignment............

Sri M. LINGANNA (Nanjangud).—May I know how it is 7 lakhs when it is purely a fund operated by Local Bodies?

Sri T. CHANNIAH.—According to the Village Panchayets and District Boards Act, 25 per cent of the land revenue will go to the Village Panchayets and District Boards and the amount thus due is about 28 lakhs. Out of the amount, 7 lakhs of rupees have been assigned for water supply.

Then, with regard to the point raised by Sri B. Rachiah, the Chief Minister has mentioned two or three days back that for the amelioration of the Depressed Classes, a sum of 32 lakhs have been spent and the important measures undertaken are the construction of nearly 30,000 houses and the grant of one lakh of acres of land. For scholarships and formation of A. K. colonies and such other amenities the total amount spent is nearly 32 lakhs and odd.

12 NOON.

Government have taken action to see that the amounts unspent out of the grants allotted for the uplift of Harijans does not lapse at the end of the year. It will be funded. Any suggestions by Hon'ble Members for improving the condition of Harijans will be considered.

Regarding civil disabilities, orders have been passed in regard to the removal of disabilities. Government have been implementing the provisions of the Civil Disabilities Removal Act. Instructions have been issued to Deputy Commissioners to see that the provisions of the Act are implemented.

Mr. SPEAKER.—The question is:

"That a sum not exceeding Rs. 49,15,000 be granted to the Government to defray the charges which will come in course of payment during the year ending 31st day of March 1955, in respect of 'Rural Development'."

The motion was adopted.

DEMAND No. 24.—VETERINARY.

51. Veterinary Charges.

Mr. SPEAKER.—Motion moved:

"That a sum not exceeding Rs. 29,11,000 be granted to the Government to defray the charges which will come in course of payment during the year ending 31st day of March 1955, in respect of 'Veterinary Charges'."

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ವೆಟರಿನರಿ ಇಲಾಖೆಯ ಪ್ರಾಮುಖ್ಯತೆಯನ್ನು ನಾನು ಸಭೆಯ ಗಮನಕ್ಕೆ ತರಬೇಕಾದ ಆವಶ್ಯಕತೆ ಇಲ್ಲ. ವ್ಯವಸಾಯವೇ ಪ್ರಾಧಾನ್ಯವಾಗಿವುಳ್ಳ ಈ ದೇಶದಲ್ಲಿ ಈ ಇಲಾಖೆಯ ಕಾರ್ಯಕ್ಷೇತ್ರ ಎಷ್ಟು ಸಮರ್ಪಕವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಈ ಇಲಾಖೆಯ ಕಾರ್ಯಕ್ಷೇತ್ರವನ್ನು ನಾಲ್ಕು ವಿಧವಾಗಿ ವಿಂಗಡಿಸಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ತಳಿಯ ಅಭಿವೃದ್ಧಿ ಕಾರ್ಯ, ಉತ್ತಮವಾದ ಮೇವು. ಪಶುವೈದ್ಯ ಮತ್ತು ರಿಸರ್ಚ್ ಎಂಬುದಾಗಿ ನಾಲ್ಕು ವಿಧವಾಗಿ ವಿಂಗಡಿಸಬಹುದು.

ಪಶುವೈದ್ಯಸಹಾಯದ ಬಗ್ಗೆ ಈಗಾಗಲೇ ನಮಗೆ ಅಂಕಿಅಂಶಗಳು ಗೊತ್ತಾಗಿದೆ. ನಮ್ಮ ದೇಶದ ದನಗಳ ಸಂಖ್ಯೆಗೆ, 28 ಸಾವಿರ ದನಗಳಿಗೆ ಒಂದು ಪಶುವೈದ್ಯಶಾಲೆ ಇದೆ. ಇದನ್ನು ಇನ್ನೂ ಹೆಚ್ಚಿಸಬೇಕೆಂದು, 25 ಸಾವಿರ ದನಗಳಿಗೆ ಒಂದು ಪಶುವೈದ್ಯಶಾಲೆ ಇರುವಂತೆ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ, ಅದನ್ನು ಮಾಡುತ್ತಾರೆಂಬ ನಂಬಿಕೆ ಸಹ ನನಗಿದೆ.

ಇನ್ನು ಉತ್ತಮವಾದ ಮೇವಿನ ಬಗ್ಗೆ ಆವಶ್ಯಕತೆ ಬಹಳವಾಗಿದೆ ಎಂದು ತಿಳಿಸಬೇಕಾಗಿದೆ. ಈಗಿರತಕ್ಕ ಗೋಮಾಳ ಎಷ್ಟು ನಿಷ್ಪ್ರಯೋಜನವಾಗಿದೆ ಎಂಬ ಅಂಶವು ಗ್ರಾಮಾಂತರಗಳಿಂದ ಬಂದಿರುವ ಸದಸ್ಯರಿಗೆ ಗೊತ್ತು. ಗೋಮಾಳ ಪ್ರದೇಶವನ್ನು ಅತ್ಯುತ್ತಮ ರೀತಿಯಲ್ಲಿಡಲು ಸಾಧ್ಯವಾಗದಿದ್ದರೆ, ಪ್ರತಿಯೊಬ್ಬ ರೈತರಿಗೂ ಅವರ ದನಕರು ಎಮ್ಮೆಗಳಿಗೆ ಬೇಕಾಗುವಷ್ಟು ಮೇವನ್ನು ಅವರೇ ಯಥೇಚ್ಛವಾಗಿ ಬೆಳೆಸಿಕೊಳ್ಳುವಂತೆ ಸರ್ಕಾರದವರು ಪ್ರೋತ್ಸಾಹ ಕೊಡುವುದು ಸೂಕ್ತವೆಂದು ನನ್ನ ಸಲಹೆ. ದೇಶದಲ್ಲಿ ದನಗಳಿಗೆ ಉತ್ತಮವಾದ ಮೇವಿಲ್ಲದಿದ್ದರೆ ಇತರ ಯಾವ ಕೆಲಸವಾಗಲಿ — ತಳಿಯ ಅಭಿವೃದ್ಧಿ ಕಾರ್ಯವಾಗಲಿ ಅಥವಾ ರಿಸರ್ಚ್ ಕೆಲಸವಾಗಲಿ — ಸಮರ್ಪಕವಾಗಿ ಆಗುವುದಿಲ್ಲವೆಂಬುದು ರೈತರಿಗೆಲ್ಲಾ ತಿಳಿದಿರುವ ಅಂಶವೇ ಆಗಿದೆ. ಸರ್ಕಾರದವರು ಈ ರೈತಾಪಿ ಜನರಿಗೆ ಉತ್ತಮವಾದ ಮೇವನ್ನು ಬೆಳೆಸಿಕೊಳ್ಳಲು ಉತ್ತಮವಾದ ಹುಲ್ಲು, ಬೀಜ, ಗೊಬ್ಬರ ಬೇಕಾದ ತಿಳಿವಳಿಕೆ ಇವುಗಳನ್ನು ಒದಗಿಸುವುದರ ಮೂಲಕ ಸಹಾಯ ಮಾಡಬೇಕು.

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಇನ್ನು ತಳಿಯ ಅಭಿವೃದ್ಧಿಕಾರ್ಯ ರೈತರ ಕೈಲಿ ಅತ್ಯಂತ ಯಶಸ್ವಿಯಾಗಿ ವೈಜ್ಞಾನಿಕರೀತಿಯಲ್ಲಿ ಆಗದೇ ಇರತಕ್ಕ ಕೆಲಸ. ಅತನಿಗೆ ಎಷ್ಟೇ ಪ್ರೋತ್ಸಾಹ ಕೊಟ್ಟರೂ, ಎಷ್ಟೇ ತಿಳಿವಳಿಕೆ ಇದ್ದರೂ ಉತ್ತಮವಾದ ಬೀಜದ ಹೋರಿಗಳು ಅವನಿಗೆ ದೊರಕುವುದಕ್ಕೆ ಅವಕಾಶವಿರುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ನಮಗೆ ಗೊತ್ತಿರುವಹಾಗೆ ಅಜ್ಜಂಪುರದಲ್ಲಿ ಅಮೃತಮಹಲ್ Pedigree Bulls ಸಾಕುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ದೇಶದ ತಳಿಗಳನ್ನು ವಿಂಗಡಿಸಿ ಅವುಗಳನ್ನು ಅಭಿವೃದ್ಧಿಪಡಿಸಲು ತಕ್ಕ ವ್ಯವಸ್ಥೆ ಮಾಡಬೇಕಾದುದು ಅಗತ್ಯ. ನಮ್ಮ ದೇಶದಲ್ಲಿರತಕ್ಕ ದನಗಳಲ್ಲಿ ಅಮೃತಮಹಲ್, ಹಳ್ಳಿಕಾರ್, ಸಿಂಧಿ ಮತ್ತು ಬೆರಕೆ ದನಗಳನ್ನು ಬೇರೆ ಬೇರೆ ವಿಂಗಡಿಸಿ ಈ ತಳಿಗಳ ಅಭಿವೃದ್ಧಿಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕು. ಹಳ್ಳಿಕಾರ್ ದನಗಳು ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ, ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿವೆ. ಅದರಲ್ಲಿಯೂ ಮುಖ್ಯವಾಗಿ ತೀರಾ ಉತ್ತಮವಾದ ಹಳ್ಳಿಕಾರ್ ರಾಸುಗಳಿರುವುದು ಕುಣಿಗಲ್, ನಾಗಮಂಗಲ, ಚನ್ನರಾಯಪಟ್ಟಣ, ಮಾಗಡಿ ಮತ್ತು ಗುಬ್ಬಿಯ ಕೆಲವು ಭಾಗಗಳಲ್ಲಿ ; ಅಲ್ಲದೆ, ಚನ್ನಪಟ್ಟಣದ ಕೆಲವು ಭಾಗಗಳಲ್ಲಿಯೂ ಇವೆ. ಸ್ವಲ್ಪ ಬೆರಕೆ ಅಮೃತಮಹಲ್ ಮತ್ತು ಹಳ್ಳಿಕಾರ್ ರಾಸುಗಳು ಕನಕಪುರದಲ್ಲಿವೆ ; ಒಳ್ಳೆಯ ಅಮೃತಮಹಲ್ ರಾಸುಗಳು ಚಿತ್ರದುರ್ಗ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಂಚಿಹೋಗಿವೆ ; ಬೆಂಗಳೂರಿನಲ್ಲಿ ಸಿಂಧಿ ರಾಸು ಮತ್ತು ಬೆರಕೆ ಸಿಂಧಿ ಇವೆ. ಹೀಗೆ ಆಯಾಭಾಗದಲ್ಲಿರುವ ರಾಸುಗಳು ಯಾವುವು ಎಂಬುದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಈ ಬಗ್ಗೆ ತಳಿಗಳ ಅಭಿವೃದ್ಧಿಗೆ ಪೂರ್ಣ ಪ್ರೋತ್ಸಾಹ ಕೊಡುವುದು ಅಗತ್ಯ. ಹಳ್ಳಿಕಾರ್ ರಾಸುಗಳ ಗುಣ ವೈಶಿಷ್ಟ್ಯವೇ ಬೇರೆ ರೀತಿ. ಅಮೃತಮಹಲ್ ರಾಸುಗಳ ಗುಣ ವೈಶಿಷ್ಟ್ಯವೇ ಬೇರೆ ರೀತಿ. ಹೀಗಿರುವಲ್ಲಿ ಒಂದಕ್ಕೊಂದು ಬೆರಕೆ ಮಾಡುವುದರಿಂದ ರೈತರಿಗೆ ಅಪಾರ ನಷ್ಟವಾಗುತ್ತದೆ. ಸರ್ಕಾರದವರು ಈ ಕಾರ್ಯಕ್ಷೇತ್ರದಲ್ಲಿ ಬಹಳ ಹೆಚ್ಚಿನ ಕೆಲಸ ಮಾಡಬೇಕಾಗಿದೆ.

ಅಮೃತಮಹಲ್ ರಾಸು ಇರುವ ಪ್ರದೇಶಗಳಿಗೆ ಉತ್ತಮವಾದ ಬೀಜದ ಹೋರಿಗಳನ್ನು ಒದಗಿಸಬೇಕು. ಅಜ್ಜಂಪುರದಲ್ಲಿ ಈ ಬಗ್ಗೆ ವ್ಯವಸ್ಥಿತ ಕಾರ್ಯಕ್ರಮ ನಡೆಯುತ್ತಿದೆ. ಆದರೆ ಅಲ್ಲಿ ಖರ್ಚಾಗುತ್ತಿರುವುದನ್ನು ಅದರಿಂದ ಲಭಿಸುವ ಪ್ರಯೋಜನಕ್ಕೆ ಹೋಲಿಸಿದುದೇ ಆದರೆ ಶೋಚನೀಯ ಪರಿಸ್ಥಿತಿ ಕಂಡುಬರುತ್ತದೆ. ಸಾಯತಕ್ಕ ರಾಸುಗಳ ಸಂಖ್ಯೆ, ಖರ್ಚಾಗತಕ್ಕ ಹಣ—ಇವನ್ನು ನೋಡಿದರೆ ಏಕೆ ಹೀಗಾಗುತ್ತಿದೆ ಎಂಬ ಕಡೆಗೆ ಇಲಾಖೆಯವರು ಅಷ್ಟಾಗಿ ಗಮನ ಕೊಟ್ಟಿಲ್ಲವೆಂದು ವ್ಯಕ್ತವಾಗುತ್ತದೆ. ಇನ್ನು ಕೆಲವು ಕಡೆ ಅಮೃತಮಹಲ್ ತಳಿಗಳ ಅಭಿವೃದ್ಧಿಕಾರ್ಯ ಕಡಿಮೆ ಖರ್ಚಿನಲ್ಲಿ ನಡೆಸುವ ಪ್ರಯತ್ನ ನಡೆಯುತ್ತಿದೆ. ಹಳ್ಳಿಕಾರ್ ಜಾತಿಯ ಹಸುಗಳಿಗೆ ಉತ್ತಮರೀತಿಯ ಬೀಜದ ಹೋರಿಗಳನ್ನು ಒದಗಿಸುವ ಬಗ್ಗೆ ಪ್ರಯತ್ನ ಅಷ್ಟಾಗಿ ನಡೆಯುತ್ತಿಲ್ಲ. ಕುರಿಕುಪ್ಪೆ ಮತ್ತು ಹೆಸರುಘಟ್ಟಗಳಲ್ಲಿ ನಡೆಯುತ್ತಿರುವ ಕೆಲಸ ಹಳ್ಳಿಕಾರ್ ದನಗಳ ಸಂಖ್ಯೆಗೆ ಅನುಗುಣವಾಗಿಲ್ಲ. ಹಳ್ಳಿಕಾರ್ ರಾಸುಗಳಿಗೆ ಉತ್ತಮವಾದ ಬೀಜದ ಹೋರಿಗಳನ್ನು ಕೊಡಿಸುವ ಪ್ರಯತ್ನ ಹೆಚ್ಚಾಗಿ ನಡೆಯಬೇಕು. ಹಳ್ಳಿಗಳಲ್ಲಿಯೂ ಕೃತಕ ವೀರ್ಯ ಪ್ರಯೋಗ ಹೆಚ್ಚಾಗಿ ಜಾರಿಗೆಬರುತ್ತಿದೆ. ಆದುದರಿಂದ ಉತ್ತಮವಾದ ಬೀಜದ ಹೋರಿಗಳನ್ನು ಸರ್ಕಾರದವರು ಒದಗಿಸಲು ಸರ್ವಪ್ರಯತ್ನ ಮಾಡಿ ಈ ತಳಿಗಳ ಅಭಿವೃದ್ಧಿಕಾರ್ಯ ಯಶಸ್ವಿಯಾಗಿ ಜರುಗುವಂತೆ ಮಾಡಬೇಕೆಂದು ನನ್ನ ಸಲಹೆ.

ಇನ್ನು ಕುಣಿಗಲ್ ಸ್ಟಡ್ ಫಾರಂ ವಿಷಯ ಹೇಳಬೇಕಾಗಿದೆ. ಈ ಸ್ಟಡ್ ಫಾರಂನಲ್ಲಿ ಸರ್ಕಾರದ ಕುದುರೆಗಳು ಬಹಳ ಕಡಿಮೆಯಾಗಿ ಇವೆ. ಅಲ್ಲಿ ಇದ್ದರೂ ಜೂಜಾಡತಕ್ಕ ರೇಸ್ ಕ್ಲಬ್‌ನವರ ಕುದುರೆಗಳನ್ನಿಟ್ಟುಕೊಂಡು ಅವನ್ನು ಸಾಕಿ ಜೂಜಿನ ಕುದುರೆಗಳನ್ನು ಉತ್ಪನ್ನಮಾಡಬೇಕಾಗಿದೆ. ಸರ್ಕಾರದವರು ಅದಕ್ಕೆ ಬದಲಾಗಿ ತಾವೇ ಬಂಡವಾಳ ಹಾಕಿ ಉತ್ತಮವಾದ ಕುದುರೆಗಳನ್ನು ಒದಗಿಸಿಕೊಟ್ಟರೆ ಆ ಫಾರಂನಲ್ಲಿ ಖರ್ಚುಮಾಡುವುದಕ್ಕೆ ತಕ್ಕಂತೆ ಆದಾಯವೂ ಸಹ ಬರುವುದಕ್ಕೆ ಅವಕಾಶವಿದೆ. ಅಲ್ಲಿ ಒಳ್ಳೆಯ ಉತ್ತಮವಾದ ಹುಲ್ಲುಗಾವಲೂ ಇದೆ. ಅದನ್ನು ಅಭಿವೃದ್ಧಿಮಾಡುವುದಕ್ಕೆ ಸರ್ಕಾರದವರು ಹೆಚ್ಚು ಪ್ರಯತ್ನಮಾಡಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಅಂತೂ ಆ ಕಾರ್ಯಕ್ಷೇತ್ರದಲ್ಲಿ ಸರ್ಕಾರದವರು ಎಷ್ಟು ಸಮರ್ಪಕವಾಗಿ ಕೆಲಸಮಾಡಿದರೆ ಅಷ್ಟೂ ಪ್ರಯೋಜನ ರೈತನಿಗೆ ಲಭಿಸುತ್ತದೆ. ಇದರ ಕಡೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ಯೋಗ್ಯರಾದ ಮತ್ತು ದಕ್ಷತೆ ಇರತಕ್ಕ ಮಾನ್ಯ ಮಂತ್ರಿಗಳು ಬಂದಿದ್ದಾರೆ ಎಂದು ಭಾವಿಸುತ್ತೇನೆ. ಇದರಲ್ಲಿ ಹೆಚ್ಚಿನ ಕೆಲಸ ತಳಿ ಅಭಿವೃದ್ಧಿ ಕಾರ್ಯದಲ್ಲಿ ನಡೆಯಬೇಕಾಗಿದೆ. ಪೆಡಿಗ್ರೀ ಬುಲ್ಸ್ ಮಾತ್ರ ಉತ್ಪನ್ನಮಾಡಿ ರೈತರಿಗೆ ಒದಗಿಸಿದರೆ ಒಳ್ಳೆಯದು. ಬೆರಕೆ ಬೀಳತಕ್ಕ ಹೋರಿಗಳನ್ನು ಒದಗಿಸುವುದರಿಂದ ಬಹಳ ನಷ್ಟವಾಗುತ್ತದೆ. Castration of scrub bulls ಎಂದು ಹೇಳಿ ಒಂದು ಕಾನೂನೂ ಕೂಡ ಇದೆ. ಈ ಕಾನೂನು ಜಾರಿಗೆ ತಂದು ಉತ್ತಮವಾದ ಹೋರಿಗಳನ್ನು ಒದಗಿಸುವುದಕ್ಕೆ ಅವಕಾಶಮಾಡಿಕೊಟ್ಟರೆ ಹೆಚ್ಚಿನ ಸಹಾಯವಾಗುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ. (ತುರುವೇಕೆರೆ)—ನಮ್ಮ ದೇಶದಲ್ಲಿ ಪಶುವೈದ್ಯ ಎಲ್ಲಾಕಡೆಯೂ ಚೆನ್ನಾಗಿ ದೊರೆಯುತ್ತಿದೆ ಎಂಬುದನ್ನು ಖಂಡಿತವಾಗಿ ಹೇಳಬಲ್ಲೆ. ಏಕೆಂದರೆ ಬಳ್ಳಾರಿ ನೋಡಿಕೊಂಡರೆ ನಮ್ಮ ದೇಶ ಇತರ ದೇಶಗಳಿಗಿಂತ ಬಹಳವಾಗಿ ಮುಂದುವರಿದಿದೆ ಎಂದು ಹೇಳಬಹುದು. ಈಗ ಎಷ್ಟೋ ಜನ ಮುಂದೆ ಬಂದು ಪಶುವೈದ್ಯ ಶಾಲೆಗಳಿಗೆ ಕಟ್ಟಡ ಕೂಡ ಕಟ್ಟಿಸಿ ಕೊಟ್ಟಿದ್ದಾರೆ. ಜನಗಳಲ್ಲಿ ಎಷ್ಟು ಆಸಕ್ತಿ ಇದೆ ಎಂಬುದಕ್ಕೆ ಇದೂ ಒಂದು ನಿದರ್ಶನ. ಪ್ರತಿಯೊಂದು ವೈದ್ಯಶಾಲೆಯೂ ಸಹ ಡೊನೇಷನ್ ನಿಂದಲೇ ಆಗುತ್ತಿದೆ. ಇದರಿಂದ ಹೆಚ್ಚು ವೈದ್ಯಶಾಲೆಗಳಾಗುವುದಕ್ಕೆ ಅವಕಾಶವಾಗಿದೆ. ಈ ಮೂಕ ಪ್ರಾಣಿಗಳಿಗೆ ವೈದ್ಯಶಾಲೆಗಳನ್ನು ಒದಗಿಸಲು ಸಾಧ್ಯವಾದಷ್ಟುಗೂ ಒಂದು ಪ್ಲಾನ್ ಹಾಕಿಕೊಂಡು ಕೆಲಸಕಾರ್ಯಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ತಳಿ ಅಭಿವೃದ್ಧಿ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಈಗಾಗಲೇ ತಳಿ ಅಭಿವೃದ್ಧಿ ವಿಚಾರದಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದ್ದಾರೆ. ಅಮೃತ್ ಮಹಲ್ ವಿಚಾರ ಹೇಳುತ್ತೇನೆ. ಇದು ಪ್ರಪಂಚದಲ್ಲೇ ಶ್ರೇಷ್ಠವಾದ ತಳಿ. ನಮ್ಮ ದೇಶ ಶೇಕಡ 80 ರಷ್ಟು ವ್ಯವಸಾಯಗಾರರಿರತಕ್ಕ ದೇಶ. ನಮ್ಮ ದೇಶದಲ್ಲಿ ದನಗಳಿಲ್ಲದೆ ವ್ಯವಸಾಯಮಾಡುವುದಕ್ಕೆ ಸಾಧ್ಯವಿಲ್ಲ. ಕೇವಲ ಒಂದೆರಡು ಎಕರೆ ಇಟ್ಟುಕೊಂಡಿರತಕ್ಕ ರೈತರು 3-4 ಲಕ್ಷ ಜನ ಇದ್ದಾರೆ.

ಒಳ್ಳೆಯ ಎತ್ತುಗಳಿಲ್ಲದೆ ವ್ಯವಸಾಯಮಾಡುವುದಕ್ಕೆ ಸಾಧ್ಯವಿಲ್ಲ. ಮೊದಲು ಒಳ್ಳೆಯ ಎತ್ತುಗಳನ್ನು ಮಿಲಿಟರಿ ಇಲಾಖೆಯವರು ಇಟ್ಟುಕೊಂಡಿರುತ್ತಿದ್ದರು. 1920ನೇ ಇಸವಿಯಲ್ಲಿ ಮಿಲಿಟರಿ ಇಲಾಖೆಯು ಎತ್ತುಗಳನ್ನು ವ್ಯವಸಾಯದ ಇಲಾಖೆಗೆ ವರ್ಗಾಯಿಸಿದರು. ಕಾರಣ ಮೋಟಾರುವಗ್ಯೆರೆ ಬಂದದ್ದರಿಂದ ಅವನ್ನು ಬಿಟ್ಟುಬಿಟ್ಟರು. ಆಗಿನಿಂದಲೂ ಈ ಎತ್ತುಗಳು ಬಹಳ ಹೀನಸ್ಥಿತಿಗೆ ಬರುತ್ತಾ ಇವೆ. ಈ ಇಲಾಖೆಯು ಕಾರ್ಯಕ್ರಮ 3-4 ತರಹವಾಗಿದೆ. ಒಂದು ಕ್ಯಾಟಲ್ ಬ್ರೀಡಿಂಗ್ ಸ್ಟೇಷನ್ ಅಂತ ಮಾಡಿದ್ದೀರಿ. ಮತ್ತೊಂದು ಷೀಪ್ ಬ್ರೀಡಿಂಗ್ ಸ್ಟೇಷನ್ ಅಂತ ಮಾಡಿದ್ದೀರಿ ಈ ರೀತಿ ಒಂದು 1928ರಲ್ಲಿ ಅಜ್ಜಂಪುರದಲ್ಲಿ ಆಯಿತು, ಸೆಲ್ಫ್ ಸಪೋರ್ಟಿಂಗ್ ಆಗಿರಬೇಕೆಂದು ಕಂಡೀಷನ್ ಮೇಲೆ ಪ್ರಾರಂಭಮಾಡಿದರು. ಆದರೆ 25 ವರ್ಷಗಳಾದರೂ ಕೂಡ ಆ ರೀತಿ ಆದಂತೆ ಕಾಣುತ್ತಿಲ್ಲ. ಇದು ಬರೀ ಎಕ್ಸ್‌ಪೆರಿಮೆಂಟಲ್ ಫಾರಂ ಆಗಿ ಅಲ್ಲಿರತಕ್ಕ ದನಗಳು ತಮ್ಮ ಸ್ವಭಾವತಃ ಇರತಕ್ಕ ಗುಣವನ್ನೇ ಕಳೆದುಕೊಂಡಿವೆ. ಅವಕ್ಕೆ ಏನಿದ್ದರೂ, ಒಂದು ಕಡೆ ಕಟ್ಟಿಹಾಕಿ ಅಭ್ಯಾಸವಿಲ್ಲ, ಹೊರಗಡೆ ಹೋಗಿ ಮೇವು ತಿಂದುಕೊಂಡು ಬರಬೇಕು. ಹಾಗಾದರೆ ಅವು ಅಭಿವೃದ್ಧಿಗೆ ಬರುವುದು. ನಮ್ಮ ದೇಶದಲ್ಲಿ ದನಗಳ ಅವಶ್ಯಕತೆ ಬಹುಮಟ್ಟಿಗೆ ಇದೆ. ಬೀಜದ ಹೋರಿಗಳನ್ನು ಕೊಡತಕ್ಕ ಒಂದು ಸ್ಕೀಂ ಅಜ್ಜಂಪುರದಲ್ಲಿ ಪ್ರಾರಂಭಮಾಡಿ ಅದರಿಂದ ಏನೋ ಸ್ವಲ್ಪಮಟ್ಟಿಗೆ ಸಹಾಯವಾಗಿದೆ. ಹಳ್ಳಿಕಾರ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ. ಈ ಇಲಾಖೆಯಲ್ಲಿ ಖರ್ಚು ಉಳಿತಾಯಮಾಡುವುದಕ್ಕೆ ಆನೇಕ ಮಾರ್ಗಗಳು ಇವೆ. ಈ ಪ್ರಶ್ನೆ ಹಿಂದೆ ಅನೇಕಸಾರಿ ಬಂದಿದೆ. ಸಾವಿರಾರು ಪಲ್ಲ ಹುರುಳಿ ಕೊಡುತ್ತೀರಿ, ಬೂಸ ಕೊಡುತ್ತೀರಿ ಅದೆಲ್ಲಾ ವ್ಯರ್ಥ. ದನಗಳ ಸಂಖ್ಯೆ ಮಾತ್ರ ಜಾಸ್ತಿ ಆಗುತ್ತಿಲ್ಲ. ಆದ್ದರಿಂದ ಈಗಿರತಕ್ಕ ಸಂಖ್ಯೆಯಾದರೂ ಇನ್ನೂ ಮುಂದೆ ಕೆಳಗೆ ಹೋಗದಹಾಗೆ ನೋಡಿಕೊಳ್ಳಬೇಕೆಂದು ಸರ್ಕಾರದವರಿಗೆ ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಮನುಷ್ಯನಿಗೆ ಆರೋಗ್ಯವು ಎಷ್ಟು ಮುಖ್ಯವೋ ದನಗಳಿಗೂ ಕೂಡ ಅಷ್ಟೇ ಮುಖ್ಯವಾದದ್ದು ಎಂದು ನಾನು ಭಾವಿಸುತ್ತೇನೆ. ಸಾಮಾನ್ಯವಾಗಿ ಮನುಷ್ಯ ಸುಖಪಡಬೇಕಾದರೆ ಪಶು ಸಂಪತ್ತು ಚೆನ್ನಾಗಿದ್ದರೆ ಮಾತ್ರ ಸಾಧ್ಯ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ದನಗಳ ಸ್ಥಿತಿ ಬಹಳ ಹಿಂದುಳಿದಿದೆ. ಶ್ರೀಮಾನ್ ಭೀಮಪ್ಪನಾಯಕರು ಮತ್ತು ಶ್ರೀಮಾನ್ ಹುಚ್ಚೇಗೌಡರು ಹೇಳಿದಹಾಗೆ ಮೈಸೂರು ದೇಶದಲ್ಲಿ ಹಿಂದೆ ಎಷ್ಟು ದನಗಳ ಸಂಖ್ಯೆ ಇತ್ತೋ ಅದರಲ್ಲಿ ಅರ್ಧಕ್ಕಿಂತ ಕಡಿಮೆ ಆಗಿದೆ. ಕಾರಣ ಇಷ್ಟೇ. ದನಗಳಿಗೆ ಮೇಯಲಿಕ್ಕೆ ಸರಿಯಾದ ಜಾಗ ಇಲ್ಲ, ಎರಡನೆಯದಾಗಿ ಒಳ್ಳೆಯ ಬೀಜದ ಹೋರಿಗಳು ಇಲ್ಲ. ಹಳ್ಳಿಗಳ ಕಡೆ ತಾವು ಸ್ವಲ್ಪ ಹೋದರೆ ಗೊತ್ತಾಗುತ್ತದೆ. ನಾನು ಅನೇಕ ಹಳ್ಳಿಗಳ ಕಡೆ ಪ್ರವಾಸ ಮಾಡಿದ್ದೇನೆ. ವ್ಯವಸಾಯಕ್ಕೆ ಒಳ್ಳೆಯ ದನಗಳು ಸಿಕ್ಕುತ್ತಾ ಇಲ್ಲ. ಬೇಸಾಯ ಮಾಡುವುದಕ್ಕೆ ಪ್ರಾರಂಭ ಮಾಡಿದಕೂಡಲೇ ಒಳ್ಳೆಯ ಬಲವಾದ ಎತ್ತುಗಳು ಇದ್ದಪಕ್ಷದಲ್ಲಿ ವ್ಯವಸಾಯ ಮಾಡಲಿಕ್ಕೆ ಚೆನ್ನಾಗಿರುತ್ತದೆ. ವ್ಯವಸಾಯ ಬಹಳ ಚೆನ್ನಾಗಿ ಆಗುತ್ತದೆ. ಅದೇ ರೀತಿಯಲ್ಲಿ ಮಿಷೀನ್‌ಗಳನ್ನು ಉಪಯೋಗಿಸಿ ಮಾಡುವುದರಿಂದ ಅಷ್ಟು ಚೆನ್ನಾಗಿ ಆಗುವುದಿಲ್ಲ. ನಾನೂ ಕೂಡ ವ್ಯವಸಾಯಗಾರನೇ. ಸಂಸ್ಥಾನಾಮಳೆ ಅನೇಕರು ಟ್ರ್ಯಾಕ್ಟರುಗಳನ್ನುಪಯೋಗಿಸಿ ವ್ಯವಸಾಯ ಮಾಡಿದ್ದಾರೆ. ಅದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಕಾರಣ ಭೂಮಿ ಬಹಳ ಸಡಿಲವಾಗಿ ಮಣ್ಣು ಏಳುತ್ತದೆ. ಅದೇ ಒಳ್ಳೆಯ ಎತ್ತುಗಳನ್ನಿಟ್ಟುಕೊಂಡು ಸಾಗುವಳಿ ಮಾಡಿದರೆ ಅದಕ್ಕಿಂತ ಎರಡರಷ್ಟು, ಮೂರರಷ್ಟು ಫಸಲು ಬರುತ್ತದೆ ಎಂಬುದು ನನ್ನ ಅನುಭವ. ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮೂಲಕ ತಳಿ ಅಭಿವೃದ್ಧಿ ಮಾಡುವ ಒಂದು ಪ್ರಯೋಗ ಇದೆ. ಅದರಿಂದ ಮುಂದೆ ವ್ಯವಸಾಯಕ್ಕೆ ಅನಾಹುತವಾಗುತ್ತದೆಯೋ ಏನೋ ಎಂದು ನನಗೆ ಅನ್ನಿಸುತ್ತಿದೆ. ಸಾಧಾರಣವಾಗಿ ಹೋರಿ ಬಿಡುವುದರ ಮೂಲಕ ಹುಟ್ಟತಕ್ಕ ಕರುಗಳು ಒಳ್ಳೆಯ ಶಕ್ತಿಯುತವಾಗಿದ್ದು, ಅವು ಕೆಲವು ವರ್ಷಗಳು ಬೆಳೆದಮೇಲೆ ವ್ಯವಸಾಯಕ್ಕೆ ಬಹಳ ಸಹಕಾರಿಯಾಗುತ್ತವೆ ಎಂಬುದು ನನ್ನ ಅನುಭವದ ಮಾತು.

ಮೈಸೂರು ದೇಶದಲ್ಲಿ ಸುಮಾರು 29-30 ಸಾವಿರ ದನಗಳಿಗೆ ಒಂದು ಆಸ್ಪತ್ರೆ ಕೊಡಲಾಗುತ್ತಿದೆ ಎಂದು ಹೇಳುತ್ತೀರಿ. ಈಗ ಮನುಷ್ಯರಿಗೆ ಆಸ್ಪತ್ರೆಗಳು, ಔಷಧಿಗಳ ಆವಶ್ಯಕತೆ ಎಷ್ಟು ಇದೆಯೋ ಅಷ್ಟೇ ಆವಶ್ಯಕತೆ ದನಗಳಿಗೂ ಸಹ ಇದೆ. ಆದ್ದರಿಂದ ಹತ್ತು ಸಾವಿರ ದನಗಳಿರತಕ್ಕ ಪ್ರದೇಶಕ್ಕೆ ಒಂದೊಂದು ಆಸ್ಪತ್ರೆ ಕೊಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ನಮ್ಮ ಕಡೂರು ತಾಲ್ಲೂಕು, ಚಿಕ್ಕಮಗಳೂರು ಈ ಮಲೆನಾಡಿನ ಪ್ರದೇಶಕ್ಕೆ ಆದಷ್ಟು ಜಾಗ್ರತೆ ಇನ್ನೂ ಹೆಚ್ಚು ಪಶುವೈದ್ಯಶಾಲೆಗಳನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri A. BHEEMAPPA NAIK (Molakalmuru).—Sir, I do not propose to speak on all aspects of the subject named Veterinary except on cattle breeding and improvement of cattle. Sir, the Government of India have maintained a register to note the characteristic breed and pedigree of different kinds of cattle in India. They have given first place to Amrit Mahal of Mysore. Unfortunately in Mysore the very characteristic of Amrit Mahal cattle has been spoiled by the action of the department itself. The special feature of these cattle is, Sir, that these cattle live in the forest and bear all kinds of weather, they are accustomed to all seasonal conditions and have a characteristic of their own. It is a pride for Mysore to retain this breed. The Ajjampur Cattle Farm, Sir, has become a white elephant when compared to the expenditure that is incurred on other cattle. Out of 3,000 Amrit Mahal Cattle, only 1,000 are kept in Ajjampur Farm and the rest are in Economy Farms. Those Economy Farms cost 30 to 35 thousand whereas this one farm at Ajjampur takes away one lakh and odd. That would be most harmful. The earlier this is

(SRI A. BHEEMAPPA NAIK.)

disbanded and converted into Economy Farm it is better. The Economy Farm can be used with all advantages. If you want to conduct any research, there is a place called Hessarghatta and you can develop all the research work there. But all the 1,000 cattle cannot be handled and so they must be left to live in the forests. Now, the death rate in Ajjampur is, perhaps, 10 times the death rate in other Economy Farms. As soon as any cattle is found spoiled, they send it to the Economy Farm and the best cattle are brought here. Whenever they want breeding bulls for villagers, they bring them from Economy Farms and say they belong to Ajjampur Farm and sell them. We know it. On several occasions breeding bulls bought from the Ajjampur Farm are sent back by the villagers stating that they are useless. Sir, everyone must admit that the quality is deteriorating. Therefore I earnestly request the Minister who is a scientist by himself in this field, to look into this aspect and see that the originality of this breed is retained and the expenditure on the Ajjampur Farm is reduced to the extent that it is done in the other farms.

Dr. R. NAGAN GOWDA (Minister for Agriculture).—Mr. Speaker, Sir, I will not be able to touch on all the points that have been raised but I will touch upon some of, the most important points. Sri Huchmasthy Gowda pointed out that there should be better grazing facilities for cattle all over the State. That is an important thing. I may point out here that in this State we have got more grazing areas than in any other State in India. At least, almost half the State is considered as gomal or grazing ground but it must be properly made use of. He also said that we should try to grow better grass and also teach people how to grow better grasses. This is the line on which Government is also thinking. He also suggested to encourage raiyats to maintain the purity of those two important breeds, namely, Amrit Mahal and Hallikar. Sir, we are doing all that we can in this respect.

A question was raised about Kunigal Farm maintaining more mares and should itself take the benefit from the horses that are bred there. As a matter of fact, I am glad to tell you that last year the income was Rs. 10,000 over and above the expenditure. This year we expect to show an income of Rs. 45,000. It will be interesting to know that some years back we were incurring loss to the extent of Rs. 90,000 here. Sir, one of the ways of maintaining the purity of the breed is through artificial insemination. I do not know why Sri Y. M. Chandrasekhariah decried it so much. I will take some other opportunity to explain to him about the benefits of this.

The other question that was raised was about maintaining the purity of Amrit Mahal breed. Sir, the suggestions made by Hon'ble Members in this matter will be examined *in toto* and whatever changes that are needed will be made.

Then, Sir, about the dispensaries I will only say that in Mysore we have got more dispensaries than in any other part of India. I think it is the Agricultural Commission under Lord Linlithgow that suggested that we should have one dispensary for every 25 thousand cattle. We are just about reaching that stage; we have one for 29,000. But one dispensary for every 10,000, as was suggested, is rather too much. So with these words I request the Hon'ble Members to pass this demand.

Mr. SPEAKER.—The question is:

> "That a sum not exceeding Rs. 29,11,000 be granted to the Government to defray the charges which will come in course of payment during the year ending 31st day of March 1955, in respect of 'Veterinary Charges'."

The motion was adopted.

Mr. SPEAKER.—The House will now rise and meet again at 4 P.M.

The House adjourned at Thirty Minutes past Twelve of the Clock to meet again at Four of the Clock.